

# ಭೃಗುವಾಣಿ

ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 31 | ಜನವರಿ – ಮಾರ್ಚ್ 2019 | ರೂ. 10/– | ಸಂಚಿಕೆ 04

## ವಾರ್ಷಿಕೋತ್ಸವ ಸಂಭ್ರಮ









## ಸಡಗರದ ಆನಂದ ಮಿಲನ 2019









## ಉಲ್ಲಾಸದ ಕ್ರೀಡಾ ಮಿಲನ 2019

**ಗಮನಿಸಿ**

- ವಸಂತೋತ್ಸವ : 26.5.2019
- ಪ್ರತಿಭಾ ಸ್ಪರ್ಧೆ : 28.7.2019

*With best compliments from :*

# TEDMAG ENGINEERING & MANAGEMENT CONSULTANTS (P) LTD.

**SWAGAT, 1209, 11th CROSS,**
**HSR LAYOUT SECTOR I,**
**BANGALORE – 560 102.**

**TEL.: +91 (0)80 22586129**
**FAX: +91 (0)80 22589134**

**E-mail:**
**Bangalore : tedmagemc@hotmail.com**
**sridhar_bhat@yahoo.com**
**Chennai : myram47@gmail.com**
**Mumbai : mindi1940@yahoo.com**

- MILK PROCESSING
- FOOD PROCESSING
- PLANT TISSUE CULTURE
- ALLIED INDUSTRIES

ಭೃಗುವಾಣಿ
ಆನಂದ ಬಳಗದ ತ್ರೈಮಾಸಿಕ ಪತ್ರಿಕೆ

ಸಂಪುಟ 31 ಸಂಚಿಕೆ 04

ಅಧ್ಯಕ್ಷರು :
ಗೀತಾ ವಾಸುದೇವ ರಾವ್

ಕಾರ್ಯದರ್ಶಿ :
ಎಸ್. ಹರಿದಾಸ ಉಪಾಧ್ಯ

ಸಂಪಾದಕರು :
ಎಂ. ಸತ್ಯನಾರಾಯಣ ಭಟ್

ಸಂಪಾದಕ ಮಂಡಳಿ :
ಹರಿದಾಸ ಮುನ್ನೂರು
ಬಿ. ರಾಮದಾಸ ತಂತ್ರಿ
ಡಿ. ಶರತ್ ಕುಮಾರ ಭಟ್
ಕೆ.ಎನ್. ಅಡಿಗ
ರಂಜಿತ್ ಯಡಪಾಡಿತ್ತಾಯ
ವೈ . ಜಯಂತರಾವ್
ಟಿ.ಎಸ್. ನಾಗರಾಜ ಉಪಾಧ್ಯಾಯ

ಸಲಹೆಗಾರರು :
ಶ್ರೀಮತಿ ವಿಜಯಲಕ್ಷ್ಮಿ ಭಟ್

ಜಾಹೀರಾತು ಸಮನ್ವಯ :
ಶ್ರೀ ವೈ . ರಾಧಾಕೃಷ್ಣ
ಶ್ರೀ ಬಿ.ಎಸ್. ಬಾಲಚಂದ್ರ
ತೋಳ್ಪಾಡಿ

ಛಾಯಾಚಿತ್ರಗಳು
ಕೆ. ಬಾಲಕೃಷ್ಣ ಉಪಾಧ್ಯಾಯ

ವಿಳಾಸ :
**ಆನಂದ ಬಳಗ**
ಹೋಟೆಲ್ ಅಜಂತಾ ಆವರಣ
22ಎ, ಎಂ.ಜಿ. ರಸ್ತೆ
ಬೆಂಗಳೂರು - 560 001
ದೂರವಾಣಿ : 2559 4457

Website:
www.anandabalaga.org

# ಅಧ್ಯಕ್ಷರ ಮಾತು



ಸಹೃದಯ ಸದಸ್ಯ ಬಾಂಧವರೇ,

ವಿಲಂಬಿ ಸಂವತ್ಸರ ಮುಗಿದು ಹೊಸ ಸಂವತ್ಸರ ವಿಕಾರಿ ಈಗಾಗಲೇ ಪ್ರಾರಂಭವಾಗಿದೆ. ಕಳೆದು ಹೋದ ಸಂವತ್ಸರವು ನಮ್ಮೆಲ್ಲರ ಪಾಲಿಗೆ ಸಿಹಿ-ಕಹಿಗಳ ಮಿಶ್ರಣವಾಗಿದ್ದು ವಿಕಾರಿ ಸಂವತ್ಸರದಲ್ಲಿ ಸಿಹಿಯೇ ಜಾಸ್ತಿಯಾಗಿರಲಿ ಎಂದು ಹಾರೈಸುತ್ತೇನೆ. ಸಂವತ್ಸರದ ಹೆಸರೇ ವಿಕಾರಿ ಎಂದ ಮೇಲೆ ವರ್ಷವೆಷ್ಟು ವಿಕಾರವಾಗಿರಬಹುದೆಂದು ಗಾಬರಿಯಾಗಬೇಕಾಗಿಲ್ಲ. ಮನುಷ್ಯರ ವಿಕೃತ ಮನಸ್ಸುಗಳನ್ನೂ ಬದಲಿಸಿ, ಅವರಲ್ಲೂ ಒಳ್ಳೆಯತನವನ್ನು ಬೆಳೆಸಿ, ಎಲ್ಲರ ಬದುಕನ್ನೂ ಸುಕೃತಗೊಳಿಸುವ ಸರ್ವಶಕ್ತ ಭಗವಂತನ ಅರವತ್ತು ಹೆಸರುಗಳಲ್ಲಿ ವಿಕಾರಿಯೂ ಒದು. ಪ್ರಜಾ ಸಮುದಾಯಕ್ಕೆ ಒಳಿತನ್ನು ಮಾಡುವ ಜವಾಬ್ದಾರಿ ಸರಕಾರಕ್ಕಿರಬೇಕು. ಅಂತಹ ಒಳ್ಳೆಯ ಸರ್ಕಾರವನ್ನು ಅಧಿಕಾರಕ್ಕೆ ತರುವ ಅವಕಾಶ ಜನರಿಗಿದೆ. ಈ ಸಂಚಿಕೆ ತಮ್ಮ ಕೈಸೇರುವ ಹೊತ್ತಿಗೆ ದೇಶದ ಬಹು ಭಾಗಗಳಲ್ಲಿ ಲೋಕಸಭಾ ಚುನಾವಣೆ ಮುಗಿದಿದ್ದು, ಜನರು ಚುನಾವಣೆಯ ಫಲಿತಾಂಶಕ್ಕೆ ಕಾತುರದಿಂದ ಎದುರು ನೋಡುತ್ತಿರುತ್ತಾರೆ. ಬಳಗದ ಸದಸ್ಯರೆಲ್ಲರೂ ಮತದಾನದ ಪವಿತ್ರ ಕರ್ತವ್ಯವನ್ನು ನಿರ್ವಹಿಸಿದ್ದಾರೆ ಎಂದು ನನ್ನ ಅಚಲ ನಂಬಿಕೆ. ದೇಶದ ಸರ್ವಜನರ ಬದುಕನ್ನು ಹಸನು ಮಾಡಬಲ್ಲ ಉತ್ತಮ ಸರ್ಕಾರ ಅಧಿಕಾರಕ್ಕೆ ಬರುವಂತಾಗಲಿ ಎಂದು ನಮ್ಮೆಲ್ಲರ ನಿರೀಕ್ಷೆ ಮತ್ತು ಹಾರೈಕೆ.

ಇನ್ನು 2019ರ ಮೊದಲ ತ್ರೈಮಾಸಿಕ ಅವಧಿ ಪ್ರತಿವರ್ಷದಂತೆ ಹೆಚ್ಚಿನ ಚಟುವಟಿಕೆಗಳಿಂದ ತುಂಬಿತ್ತು. ಯುವ ವಿಭಾಗದವರು ಹಮ್ಮಿಕೊಂಡಿದ್ದ ನೂತನ ರೀತಿಯ ಆನಂದ ಮಿಲನ – 2019 ಸದಸ್ಯರ ಮನಸ್ಸಿಗೆ ಮುದನೀಡಿದರೆ, ಕ್ರೀಡಾಮಿಲನ – 2019 ನಮ್ಮಲ್ಲಿರುವ ಕ್ರೀಡಾ ಸಾಮರ್ಥ್ಯವನ್ನು ಮತ್ತೊಮ್ಮೆ ಪ್ರದರ್ಶಿಸಲು ಸೂಕ್ತ ಅವಕಾಶ ಕಲ್ಪಿಸಿದೆ. ಬಳಗದ 31ನೇ ವಾರ್ಷಿಕೋತ್ಸವವು ಸಂಭ್ರಮದಿಂದ ನಡೆದಿದ್ದು, ಅಂದು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಉದಯಹೊಳ್ಳ, ಸನ್ಮಾನಿತರಾದ ಡಾ. ಹರೀಶ್ ಹಂದೆ ಮತ್ತು ಡಾ. (ಶ್ರೀಮತಿ) ಲಕ್ಷ್ಮೀ ಜಿ. ಪ್ರಸಾದ್ ರವರು ಬಳಗದ ಸಮಾಜಮುಖಿ ಚಟುವಟಿಕೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಈ ಪ್ರಶಂಸೆ ಬಳಗದ ಎಲ್ಲಾ ಸದಸ್ಯರಿಗೆ ಸೇರಬೇಕಾಗಿದ್ದು, ಮುಂದಿನ ವರ್ಷಗಳಲ್ಲಿ ಬಳಗವನ್ನು ಇನ್ನಷ್ಟು ಕ್ರಿಯಾಶೀಲವಾಗಿ ಮಾಡಬೇಕಾದ ಜವಾಬ್ದಾರಿಯು ನಮ್ಮೆಲ್ಲರ ಮೇಲಿದೆ.

ನಮ್ಮ ಬಳಗದಲ್ಲಿ 2002-2004ನೇ ಅವಧಿಯಲ್ಲಿ ಅಧ್ಯಕ್ಷರಾಗಿ, ಬಳಗವನ್ನು ಮುನ್ನಡೆಸಿದ್ದ ಹಿರಿಯರು ಹಾಗೂ ನಮ್ಮ ಸಮಾಜದ ಗಣ್ಯವ್ಯಕ್ತಿಯಾಗಿದ್ದ ಶ್ರೀ ಪಡುಬಿದ್ರಿ ರಾಘವೇಂದ್ರ ರಾವ್‌ರವರು ನಮ್ಮನ್ನು ಅಗಲಿದ್ದಾರೆ. ಅವರ ಆತ್ಮಕ್ಕೆ ಭಗವಂತ ಸದ್ಗತಿಯನ್ನು ನೀಡಲಿ ಎಂದು ಬಳಗವು ಪ್ರಾರ್ಥಿಸಿ, ಶ್ರದ್ಧಾಂಜಲಿಯನ್ನು ಅರ್ಪಿಸುತ್ತಿದೆ.

ಈ ಸಾಲಿನ ಪ್ರಥಮ ಕಾರ್ಯಕ್ರಮವಾಗಿ ವಸಂತೋತ್ಸವವನ್ನು ಮೇ ತಿಂಗಳ 26 ರಂದು, ಸಾಂಸ್ಕೃತಿಕ ವಿಭಾಗದ ನೇತೃತ್ವದಲ್ಲಿ ಸಂಯೋಜಿಸಲಾಗಿದೆ. ವರ್ಷದ ಮೊದಲ ಉತ್ಸವಕ್ಕೆ ಬಳಗದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಬಂದು, ಸಕ್ರಿಯವಾಗಿ ಪಾಲ್ಗೊಳ್ಳಬೇಕಾಗಿ ನಮ್ಮ ಅಪೇಕ್ಷೆ. ವಸಂತೋತ್ಸವದಿಂದ ಆರಂಭಗೊಂಡು, ಮುಂದೆ ವರ್ಷಪೂರ್ತಿ ನಡೆಯುವ ಎಲ್ಲಾ ಕಾರ್ಯಚಟುವಟಿಕೆಗಳಿಗೂ ಸದಸ್ಯರೆಲ್ಲರ ಸಹಕಾರವನ್ನು ನಿರೀಕ್ಷಿಸುತ್ತೇವೆ. ಸದಸ್ಯರೇ ಯಾವುದೇ ಸಂಸ್ಥೆಯ ಜೀವಾಳವಾಗಿದ್ದು ನಿಮ್ಮೆಲ್ಲರ ರಚನಾತ್ಮಕ ಸಲಹೆ-ಸೂಚನೆ ಅಭಿಪ್ರಾಯಗಳನ್ನು ಸದಾ ಸ್ವಾಗತಿಸುತ್ತೇನೆ.

ಶುಭಾಶಯಗಳೊಂದಿಗೆ,

– ಗೀತಾ ವಾಸುದೇವರಾವ್

**Executive Committee Members : 2018-2020**

| Name | Contact Numbers |
| --- | --- |
| ***President*** | |
| Geetha Vasudeva Rao | 98808 99997 |
| ***Vice President*** | |
| B. Ramachandra Upadhya | 99024 00072 |
| Smt. Vijayalakshmi Bhat S. | 98441 52107 |
| ***Secretary*** | |
| S. Haridas Upadhya | 94480 01892 |
| ***Joint Secretary*** | |
| A. Sandeep Rao | 98450 98150 |
| ***Treasurer*** | |
| Y. Radhakrishna | 98440 58851 |
| ***Asst. Treasurer*** | |
| B.S. Balachandra Tolpadi | 94481 34268 |
| ***Convener, Cultural Wing*** | |
| H. Ramesh Bhat | 98450 24708 |
| ***Convener, Religious Wing*** | |
| Y. Jayantha Rao | 94482 74519 |
| ***Convener, Youth Wing*** | |
| M. Krishna Prasad | 98450 18183 |
| ***Convener, Edn. Assistance Program*** | |
| Sharath Chandra S.N. | 98860 40271 |
| ***Convener, Public Relation Wing*** | |
| K.N. Adiga | 94488 48154 |
| ***Convener, Membership Devt. Wing*** | |
| M.K. Gurumurthy | 98440 22692 |
| ***Convener, Community Services*** | |
| P.C. Rao | 98444 46309 |
| ***Convener, Media & Communications*** | |
| M. Dinesh Rao | 98456 88955 |
| ***Editor, Brughu Vani*** | |
| M. Sathyanarayana Bhat | 99458 02607 |
| ***Members*** | |
| Kasturi Aithal | 98803 98353 |
| ***Co-opted Members*** | |
| Geetha P.R. Rao | 99459 38411 |
| M Mohan Rao | 98453 79956 |
| Jayaprakash Mady | 98450 09669 |
| ***Permanent Invitees / Past Presidents*** | |
| P.S. Bagilthaya | 98440 83582 |
| K. Vasudeva Rao | 98450 57111 |
| UAP Ballal | 2226 7609 |
| STR Madi | 99029 77948 |
| ***Special Invitees*** | |
| T.S. Nagaraja Upadhyaya | 93412 26763 |
| Sudha M Rao | 99011 27738 |
| U V Krishna Murthy | 98440 24136 |
| Dr. (Smt.) Veena Sharath | 99860 80271 |
| Y. Sripathy Bhat | 65626972 |
| K. Gopala Krishna | 99801 28049 |
| Madhavi Ballal | 99860 39107 |

ಒಳಪುಟಗಳಲ್ಲಿ. . .


ಅಧ್ಯಕ್ಷರ ಮಾತು ... 1

ವಸಂತೋತ್ಸವ 2019

ಸತ್ಯನಾರಾಯಣಪೂಜೆ ... 3

ವಾರ್ಷಿಕೋತ್ಸವ ... 4

ಮಕ್ಕಳ ಪ್ರತಿಭಾ ಸ್ಪರ್ಧೆ ... 6

ಆನಂದ ಮಿಲನ 2019 ... 7

ಕ್ರೀಡಾ ಮಿಲನ 2019 ... 9

ವಿಶೇಷ ದಿನಗಳು + ಈಶಾವಾಸ್ಯಂ ... 11

ಕೈಲಾಸ ಪ್ರದಕ್ಷಿಣೆ ... 13

ಆಂತರಿಕ ಸೌಂದರ್ಯ ... 17

ಸಹಸ್ರಾಕ್ಷರ ಬಿಡುಗಡೆ ... 20

ತಜ್ಞರೊಂದಿಗೆ ಸಮಾಲೋಚನೆ ... 21

ಸುದ್ದಿ ಸಂಗ್ರಹ ... 23


ಭೃಗುವಾಣಿ ತ್ರೈಮಾಸಿಕದಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯಗಳ ಪೂರ್ಣ ಜವಾಬ್ದಾರಿಯು ಲೇಖಕರದ್ದೇ ಆಗಿರುತ್ತದೆ, ವಿನಹ ಸಂಪಾದಕ ಮಂಡಳಿಯದಲ್ಲ.

## ಸದಸ್ಯರಲ್ಲಿ ಮನವಿ

ಭೃಗುವಾಣಿ ನಿಮ್ಮ ಪತ್ರಿಕೆ. ನೀವು ಕಳುಹಿಸುವ ಲೇಖನ, ಕವನ, ಸಾಧನೆ-ಪರಿಚಯ, ಫೋಟೋಗ್ರಾಫ್, ಚುಟುಕು, ಹಾಸ್ಯ ಚಟಾಕಿ. ಮೊದಲಾದುವುಗಳಿಗೆ ಪ್ರಥಮ ಪ್ರಾಶಸ್ತ್ಯ . ಅದಲ್ಲದೆ ಸದಸ್ಯರ ಕುಟುಂಬದಲ್ಲಿ ನಡೆದ ಯಾವುದೇ ಸಮಾರಂಭದ ಬಗ್ಗೆ ಸಂಕ್ಷಿಪ್ತ ಮಾಹಿತಿಯನ್ನು ಅಥವಾ ಆಮಂತ್ರಣ ಪತ್ರಿಕೆಯನ್ನು ಕಳುಹಿಸಿದರೆ, ಸುದ್ದಿ-ಸಂಗ್ರಹ ಅಂಕಣದಲ್ಲಿ ಪ್ರಕಟಿಸಲು ಅನುಕೂಲ.

ಭೃಗುವಾಣಿ ಪತ್ರಿಕೆಯಲ್ಲಿ ನಿಮ್ಮದೂ ಪಾಲು ಇರಲಿ.. ಪ್ರಕಟಣೆಗೆ ಪರಿಗಣಿಸಲು ಲೇಖನ ಮತ್ತಿತರ ವಿಚಾರ ಗಳನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದಾಗಿದೆ :

ಎಂ. ಸತ್ಯನಾರಾಯಣ ಭಟ್
''ಕೃಷ್ಣ ಕೃಪಾ'', 12/1, 5ನೇ ಮೈನ್, ಇಟ್ಟುಮಡು,
ಬನಶಂಕರಿ 3ನೇ ಸ್ಟೇಜ್, ಬೆಂಗಳೂರು-560 085
E-mail: msbhat1958@gmail.com

# ವಸಂತೋತ್ಸವ 2019



ಸದಸ್ಯ ಬಾಂಧವರೇ,

ಆನಂದ ಬಳಗದ ಸಾಂಸ್ಕೃತಿಕ ವಿಭಾಗದ ನೇತೃತ್ವದಲ್ಲಿ

2019-20ನೇ ಸಾಲಿನ ಪ್ರಥಮ ಕಾರ್ಯಕ್ರಮವಾದ

'ವಸಂತೋತ್ಸವ'ವು

ದಿನಾಂಕ 26-05-2019ನೇ ಭಾನುವಾರ ಸಂಜೆ 4.15ರಿಂದ ನಡೆಯಲಿದೆ.

ಸ್ಥಳ : ಆನಂದ ಸಭಾಗೃಹ, ಬನ್ನೇರುಘಟ್ಟ ರಸ್ತೆ, ಬೆಂಗಳೂರು - 560 083

ಮುಖ್ಯ ಅತಿಥಿಗಳು :

**ಶ್ರೀ ಎ.ಬಿ. ಕುಂಜಾರ್,** ಎಂ.ಎ., ಎಂ.ಎಡ್., ಹಿಂದಿ ರತ್ನ

ನಿವೃತ್ತ ಪ್ರಾಧ್ಯಾಪಕರು ಪೂರ್ಣಪ್ರಜ್ಞ ಜೂನಿಯರ್ ಕಾಲೇಜು, ಅದಮಾರು, ವ್ಯವಸ್ಥಾಪಕರು, ಶ್ರೀ ಪುತ್ತಿಗೆ ಮಠ, ಬೆಂಗಳೂರು ಹಾಗೂ ಜನಪ್ರಿಯ ಲೇಖಕರು, ವಾಗ್ಮಿಗಳು ಮತ್ತು ಆಧ್ಯಾತ್ಮ ಚಿಂತಕರು

ಸಾಂಸ್ಕೃತಿಕ ಕಾರ್ಯಕ್ರಮ :


ವೇಣುವಾದನ : ಮಾಸ್ಟರ್ ಎನ್.ಆರ್. ಶ್ರೀಕೃಷ್ಣ ಭಟ್ ಮತ್ತು ಸಂಗಡಿಗರು

ನೃತ್ಯ ಪ್ರದರ್ಶನ : ಶ್ರೀಮತಿ ಪ್ರಿಯಾಂಕ ವಿಕ್ರಮ್

ಬಳಗದ ಸದಸ್ಯರೆಲ್ಲರೂ ಅಧಿಕ ಸಂಖ್ಯೆಯಲ್ಲಿ ಆಗಮಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕಾಗಿ ಸವಿನಯ ವಿನಂತಿ.

| | | |
|---|---|---|
| ಶ್ರೀಮತಿ ಗೀತಾ ವಾಸುದೇವರಾವ್ | ಯಸ್. ಹರಿದಾಸ ಉಪಾಧ್ಯಾಯ | ಯಚ್. ರಮೇಶ್‌ಭಟ್ |
| ಅಧ್ಯಕ್ಷರು | ಕಾರ್ಯದರ್ಶಿ | ಸಂಚಾಲಕರು |

## ಮಹಿಳಾ ವಿಭಾಗದಿಂದ ಶ್ರೀ ಸತ್ಯನಾರಾಯಣ ಪೂಜೆ



ಆನಂದ ಬಳಗದ ಮಹಿಳಾ ವಿಭಾಗ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಮಕರ ಸಂಕ್ರಾಂತಿಯಂದು (15.1.2018) ಶ್ರೀ ಸತ್ಯನಾರಾಯಣ ಪೂಜೆಯನ್ನು ಭಕ್ತಿ ಶ್ರದ್ಧೆಗಳಿಂದ ನೆರವೇರಿಸಲಾಗಿದೆ. ಹೊಟೆಲ್ ಉಡ್‌ಲ್ಯಾಂಡ್ಸ್‌ನ ಆವರಣದಲ್ಲಿ ವೇದಮೂರ್ತಿ ಬಾಯರಿ ಯವರ ಪೌರೋಹಿತ್ಯದಲ್ಲಿ ನಡೆದ ಈ ಪೂಜೆಯಲ್ಲಿ ಬಳಗದ ಅಧ್ಯಕ್ಷರು, ಮಹಿಳಾ ವಿಭಾಗದ ಅಧ್ಯಕ್ಷರು ಸೇರಿದಂತೆ ಅನೇಕ ಗಣ್ಯರು ಪಾಲ್ಗೊಂಡಿದ್ದರು. ಕಲ್ಪೋಕ್ತ ಪೂಜೆ, ಕಥಾ ಶ್ರವಣ ನಂತರ ನಡೆದ ಮಹಾ ಮಂಗಳಾರತಿಯಾದ ಮೇಲೆ ಸಪಾದ ಭಕ್ಷ್ಯ ಸಹಿತ ವಿಶೇಷ ಫಲಹಾರದ ವ್ಯವಸ್ಥೆಯನ್ನುಮಾಡಲಾಗಿತ್ತು.

# ಸಡಗರದ ವಾರ್ಷಿಕೋತ್ಸವ




ಆನಂದ ಬಳಗದ 31ನೇ ವಾರ್ಷಿಕೋತ್ಸವವು ದಿ. 24.2.2019ರ ಭಾನುವಾರ ಬೆಂಗಳೂರು ನಗರದ ಹೋಟೆಲ್ ಉಡ್‌ಲ್ಯಾಂಡ್ಸ್ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಕೃಷ್ಣ ಸಭಾಂಗಣದಲ್ಲಿ ಸಡಗರದಿಂದ ನೆರವೇರಿದೆ. ಅಂದು ಸಂಜೆ 4.25ಕ್ಕೆ ಶೈಲೂಷಮ್ ಆರ್ಟ್ಸ್ ಮತ್ತು ಕ್ರಿಯೇಶನ್ ತಂಡದ ಕಲಾವಿದರಿಂದ ಲೈವ್ ಮ್ಯೂಸಿಕ್‌ನೊಂದಿಗೆ ನಡೆದ ನೃತ್ಯ ಕಾರ್ಯಕ್ರಮದಲ್ಲಿ ತಂಡದ ಪುಟಾಣಿ ಕಲಾವಿದರು ಅಮೋಘವಾದ ನೃತ್ಯ ವೈವಿಧ್ಯವನ್ನು ಪ್ರದರ್ಶಿಸಿ, ಪ್ರೇಕ್ಷಕರ ಮನಸೂರೆಗೊಂಡರು. ಆನಂದ ಬಳಗದಲ್ಲಿ ಬಾಲಪ್ರತಿಭೆಯಾಗಿ ಕಲಾ ಜೀವನವನ್ನು ಪ್ರಾರಂಭಿಸಿ, ಇದೀಗ ಬಹು ಬೇಡಿಕೆಯ ನೃತ್ಯಪಟು ಮತ್ತು ಕಲಾ ನಿರ್ದೇಶಕರಾಗಿ ಬೆಳೆದ ವಿದ್ವಾನ್ ಅನಂತ ವಿಕ್ರಮ್ ರವರ ಬಹುಮುಖ ಪ್ರತಿಭೆ ನಿಜವಾಗಿಯೂ ಶ್ಲಾಘನೀಯ. ಬಹುರಾಷ್ಟ್ರೀಯ ಕಂಪೆನಿಯೊಂದರಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿದ್ದುಕೊಂಡು, ವೃತ್ತಿಜೀವನದ ಜೊತೆ ಜೊತೆಗೆ ಕಲಾರಾಧನೆಯನ್ನು ಮಾಡುವುದಲ್ಲದೆ ಜೊತೆಗೆ ನೂರಾರು ಆಸಕ್ತರಿಗೆ ನೃತ್ಯ ತರಬೇತಿಯನ್ನು ನೀಡುತ್ತಿರುವ ಶ್ರೀ ಅನಂತ ವಿಕ್ರಮ್‌ರವರ ಕಲಾಭಿಮಾನ ಪ್ರಶಂಸನೀಯ. ಸುಮಾರು 60 ನಿಮಿಷಗಳ ಕಾಲ ವಿವಿಧ ನೃತ್ಯ ಪ್ರಕಾರಗಳ ಮೂಲಕ ಶೈಲೂಷಮ್ ಕಲಾವಿದರು ಸಭಿಕರನ್ನು ರಂಜಿಸಿದರು.

ಪ್ರತಿವರ್ಷದಂತೆ ಈ ಸಲವೂ ವ್ಯವಸ್ಥೆ ಮಾಡಿದ್ದ "ಪರಸ್ಪರ" ಕಾರ್ಯಕ್ರಮದಲ್ಲಿ ಸದಸ್ಯರು ಮಳಿಗೆಗಳನ್ನು ತೆರೆದು ತಮ್ಮ ಸೇವೆ/ಉತ್ಪನ್ನಗಳನ್ನು ಪರಿಚಯಿಸಿದರು. ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ಲಘು ಉಪಾಹಾರದ ನಂತರ ಸಭಾ ಕಾರ್ಯಕ್ರಮ ಕು. ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ವಾರ್ಷಿಕ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ನ್ಯಾಯವಾದಿ ಹಾಗೂ ಕರ್ನಾಟಕ ಸರಕಾರದ ಅಡ್ವೋಕೇಟ್ ಜನರಲ್ ಆಗಿರುವ ಶ್ರೀ ಉದಯ ಹೊಳ್ಳ, ಸನ್ಮಾನಿತರಾದ ಮ್ಯಾಗ್ಸೆಸೆ ಪುರಸ್ಕೃತರು ಹಾಗೂ ಸೆಲ್ಕೊ ಸೋಲಾರ್ ಲೈಟ್ ಪ್ರೈ. ಲಿಮಿಟೆಡ್‌ನ ಸಹ ಸಂಸ್ಥಾಪಕರಾದ ಡಾ. ಹರೀಶ್ ಹಂದೆ, ಪ್ರಾಧ್ಯಾಪಕಿ ಮತ್ತು ಖ್ಯಾತ ತುಳು ಭಾಷಾ ಸಂಶೋಧಕಿ ಡಾ. ಲಕ್ಷ್ಮೀ ಜಿ ಪ್ರಸಾದ್, ಬಳಗದ ಅಧ್ಯಕ್ಷೆ ಶ್ರೀಮತಿ ಗೀತಾ ವಾಸುದೇವ ರಾವ್, ಉಪಾಧ್ಯಕ್ಷರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯ, ಕಾರ್ಯದರ್ಶಿ ಶ್ರೀ ಎಸ್. ಹರಿದಾಸ ಉಪಾಧ್ಯರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಗಣ್ಯರಿಂದ ಸಮಾರಂಭದ ಔಪಚಾರಿಕ ಉದ್ಘಾಟನೆಯಾದ ಬಳಿಕ, ಶ್ರೀ ಬಾ. ರಾಮಚಂದ್ರ ಉಪಾಧ್ಯರವರು ಅತಿಥಿಗಳನ್ನು ಮತ್ತು ಸಭಿಕರನ್ನು ಸ್ವಾಗತಿಸಿದರು. 2017–18ನೇ ಸಾಲಿನ ವಾರ್ಷಿಕ ವರದಿಯನ್ನು ಜೊತೆ ಕಾರ್ಯದರ್ಶಿ ಶ್ರೀ ಸಂದೀಪ್ ರಾವ್ ಸಭೆಯ ಮುಂದಿಟ್ಟರು. ಸಮಾಜದಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ, ಅವರಿಗೆ **'ಆನಂದ ಸಮಾಜ ಭೂಷಣ'** ಪ್ರಶಸ್ತಿಯನ್ನು ನೀಡಿ ಗೌರವಿಸುವ ಸತ್ಸಂಪ್ರದಾಯವನ್ನು ಬಳಗ ಕೆಲವು ವರ್ಷಗಳಿಂದ ನಡೆಸಿಕೊಂಡು ಬಂದಿದ್ದು, 31ನೇ ವಾರ್ಷಿಕೋತ್ಸವ ಸಂದರ್ಭದಲ್ಲಿ ಡಾ. ಹರೀಶ್ ಹಂದೆ ಮತ್ತು ಡಾ. ಲಕ್ಷ್ಮೀ ಜಿ ಪ್ರಸಾದ್ ರವರಿಗೆ ಆನಂದ ಸಮಾಜ ಭೂಷಣ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು. ಡಾ. ಹರೀಶ್ ಹಂದೆಯವರ ಸನ್ಮಾನ ಪತ್ರವನ್ನು ವಾಚಿಸುವುದರ ಮೂಲಕ ಶ್ರೀ ಹರಿದಾಸ್ ಉಪಾಧ್ಯರವರು ಡಾ. ಹಂದೆಯವರನ್ನು ಸಭೆಗೆ ಪರಿಚಯಿಸಿದರು. ಡಾ. ಲಕ್ಷ್ಮೀ ಜಿ



ಪ್ರಸಾದ್‌ರವರ ಪರಿಚಯವನ್ನು ಶ್ರೀಮತಿ ಮೀನಾ ಮಹಾಬಲೇಶ್ವರ ರವರು ಸನ್ಮಾನಪತ್ರವನ್ನು ವಾಚಿಸುವುದರ ಮೂಲಕ ಮಾಡಿಕೊಟ್ಟರು. ನಮ್ಮ ಸಮಾಜಕ್ಕೆ ಭೂಷಣ ಪ್ರಾಯರಾದ ಇಬ್ಬರು ಸನ್ಮಾನಿತರಿಗೆ ಶಾಲು, ಹಾರ, ಸ್ಮರಣಿಕೆ ಮತ್ತು ಸನ್ಮಾನ ಪತ್ರವನ್ನು ನೀಡಿ ಬಳಗದ ಅಧ್ಯಕ್ಷರಾದ ಶ್ರೀಮತಿ ಗೀತಾವಾಸುದೇವ ರಾವ್, ಮಹಿಳಾ ವಿಭಾಗದ ಅಧ್ಯಕ್ಷೆ ಶ್ರೀಮತಿ ರತ್ನಕಲಾ ಮಡಿ, ಬಳಗದ ಉಪಾಧ್ಯಕ್ಷರು, ಕಾರ್ಯದರ್ಶಿಯವರ ಜೊತೆಗೂಡಿ ಗೌರವಿಸಿದರು.

ಆಗಮಿಸಿದ್ದ ಶ್ರೀ ಉದಯಹೊಳ್ಳರವರನ್ನು ಬಳಗದ ಮೆಂಬರ್‌ಶಿಪ್ ಡೆವೆಲೆಪ್‌ಮೆಂಟ್ ವಿಭಾಗದ ಸಂಚಾಲಕರಾದ ಶ್ರೀ ಎಂ.ಕೆ. ಗುರುಮೂರ್ತಿಯವರು ಸಭೆಗೆ ಪರಿಚಯಿಸಿದರು. ಶ್ರೀ ಉದಯ ಹೊಳ್ಳರವರು ಮಾತನಾಡುತ್ತಾ ನಮ್ಮ ಜಿಲ್ಲೆಯ ಜನರು ತಮ್ಮ ನೇರ, ದಿಟ್ಟ ಮತ್ತು ಪ್ರಾಮಾಣಿಕ ನುಡಿ-ನಡೆಗಳಿಂದಾಗಿ ಎಲ್ಲಾ ರಂಗದಲ್ಲೂ ಪ್ರಸಿದ್ಧಿಯಾಗಿದ್ದಾರೆ. ಈ ಹೆಗ್ಗಳಿಕೆಯನ್ನು ಉಳಿಸಿಕೊಂಡು ಬರುವುದು ಅತ್ಯಗತ್ಯ ಎಂದು ಹೇಳಿ, ಬಳಗದ ಚಟುವಟಿಕೆಗಳಿಗೆ ಶುಭ ಹಾರೈಸಿದರು.





ಪ್ರಶಸ್ತಿಯನ್ನು ಸ್ವೀಕರಿಸಿದ ಡಾ. ಹರೀಶ್ ಹಂದೆಯವರು ರಾಷ್ಟ್ರ ನಿರ್ಮಾಣದ ಕಾರ್ಯದಲ್ಲಿ ಹಾಗೂ ಪರಿಸರ ಸಂರಕ್ಷಣೆಯ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಯುವ ಜನರು ಹೆಚ್ಚಿನ ಪ್ರಮಾಣದಲ್ಲಿ ಮುಂದೆ ಬಂದು, ತಮ್ಮನ್ನು ತೊಡಗಿಸಿಕೊಳ್ಳುವುದು ಇಂದಿನ ಅನಿವಾರ್ಯತೆ ಎಂದು ಪ್ರತಿಪಾದಿಸಿದರು. ಸಮಾಜವನ್ನು ಮತ್ತು ವ್ಯವಸ್ಥೆಯನ್ನು ದೂಷಿಸುವ ಬದಲು, ಅದನ್ನು ಸರಿಪಡಿಸುವತ್ತ ನಾವು ಪ್ರಯತ್ನಿಸಿದಾಗ ಮಾತ್ರಾ ಸಮಾಜ, ರಾಜ್ಯ ಮತ್ತು ದೇಶದ ಉನ್ನತಿ ಸಾಧ್ಯ ಎಂದು ಅಭಿಪ್ರಾಯಪಟ್ಟರು. ಡಾ. ಲಕ್ಷ್ಮೀ ಜಿ ಪ್ರಸಾದ್‌ರವರಯ ಮಾತನಾಡಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಸಾಂಸ್ಕೃತಿಕ ಮತ್ತು ಧಾರ್ಮಿಕ ವಿಚಾರಗಳ ತವರೂರು ಆಗಿದ್ದು, ಈ ಪರಂಪರೆಯ ಶ್ರೀಮಂತಿಕೆ ನಮ್ಮ ಮುಂದಿನ ಪೀಳಿಗೆಯವರಿಗೆ ಪರಿಚಯಿಸುವ ಕೆಲಸವನ್ನು ಆನಂದ ಬಳಗದಂತಹ ಸಂಸ್ಥೆಗಳು ಮಾಡಬೇಕಾದುದು ಅತ್ಯಗತ್ಯ ಎಂದರು. ಆನಂದ ಬಳಗದ ವೈವಿಧ್ಯಮಯ ಚಟುವಟಿಕೆಗಳನ್ನು ಪ್ರಶಂಸಿಸಿದ ಡಾ. ಲಕ್ಷ್ಮೀ ಪ್ರಸಾದ್ ರವರು ಬಳಗದಿಂದ ಇಂತಹ ಇನ್ನಷ್ಟು ಸತ್ಕಾರ್ಯಗಳು ಸಾಗುತ್ತಿರಲಿ ಎಂದು ಹಾರೈಸಿದರು. ಮುಖ್ಯ ಅತಿಥಿಗಳಾಗಿ

ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಶ್ರೀಮತಿ ಗೀತಾವಾಸು ದೇವರಾವ್‌ರವರು ಬಳಗದ ಎಲ್ಲ ಚಟುವಟಿಕೆಗಳಿಗೆ ವರ್ಷಪೂರ್ತಿ ಸಹಕಾರ ನೀಡುತ್ತಿರುವ ಸದಸ್ಯ ಬಂಧು ಗಳಿಗೆ ಮತ್ತು ಕಾರ್ಯಕ್ರಮ ಸಂಯೋಜನೆಯಲ್ಲಿ ಶ್ರಮಿಸುತ್ತಿರುವ ವಿವಿಧ ಉಪ ವಿಭಾಗಗಳ ಸಂಚಾಲಕರಿಗೆ ಮತ್ತು ಅವರ ಕಾರ್ಯತಂಡಕ್ಕೆ ಅಭಿನಂದನೆಗಳನ್ನು ಸಲ್ಲಿಸಿದರು. ಮುಂಬರುವ ದಿನಗಳಲ್ಲೂ ಬಳಗದ ಚಟುವಟಿಕೆಗಳಿಗೆ ಸದಸ್ಯರ ಸಹಕಾರವನ್ನು ಕೋರಿದ ಅಧ್ಯಕ್ಷರು ಬಳಗದ ಎಲ್ಲಾ ಕಾರ್ಯಕ್ರಮಗಳಿಗೆ ಸಹಯೋಗ ಮತ್ತು ಬೆಂಬಲವನ್ನು ಕಳೆದ 30 ವರ್ಷಗಳಿಂದ ನೀಡುವ ಅವಕಾಶ ಲಭಿಸಿರುವುದು ಉಡ್‌ಲ್ಯಾಂಡ್ಸ್ ಬಳಗದ ಸುಯೋಗ ಎಂದು ತಿಳಿಸಿದರು. ಬಳಗವನ್ನು ಸದಾ ಪೋಷಿಸಿಕೊಂಡು ಬರುವ ಹಾಗೂ ವಾರ್ಷಿಕೋತ್ಸವ ದಿನದಂದು ಸುವ್ಯವಸ್ಥಿತವಾದ ಸಭಾಂಗಣ ಮತ್ತು ಭರ್ಜರಿ ಭೋಜನದ ವ್ಯವಸ್ಥೆಯನ್ನು ಮಾಡಿದ ಹೋಟೆಲ್ ಉಡ್‌ಲ್ಯಾಂಡ್ಸ್‌ನ ಮಾಲಿಕರಾದ ಶ್ರೀ. ಕೆ. ವಾಸುದೇವರಾವ್ ರವರಿಗೆ ಪುಷ್ಪಗುಚ್ಚವನ್ನು ನೀಡಿ ಕೃತಜ್ಞತೆ ಸಮರ್ಪಿಸಲಾಯಿತು. ಬಳಗದ ಧಾರ್ಮಿಕ ವಿಭಾಗದ ಸಂಚಾಲಕರಾದ ಶ್ರೀ ವೈ. ಜಯಂತರಾವ್






ಧನ್ಯವಾದ ಅರ್ಪಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆಯನ್ನು ಸಾರ್ವಜನಿಕ ಸಂಪರ್ಕ ವಿಭಾಗದ ಸಂಚಾಲಕರಾದ ಡಾ. ಕೆ.ಎನ್. ಅಡಿಗ ಮಾಡಿದರೆ, ಸಭಾ ಕಾರ್ಯಕ್ರಮದ ನಿರೂಪಣೆಯ ಜವಾಬ್ದಾರಿಯನ್ನು ಶ್ರೀಮತಿ ಶೋಭಾ ರಾಧಾಕೃಷ್ಣ ಮತ್ತು ಶ್ರೀ ಸತ್ಯನಾರಾಯಣ ಭಟ್ ನಿರ್ವಹಿಸಿದರು. ಉಡ್‌ಲ್ಯಾಂಡ್ಸ್‌ನ ಸೌಜನ್ಯದಿಂದ ರಾತ್ರಿ ಭರ್ಜರಿ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

---

ಗಮನಿಸಿ

# ಮಕ್ಕಳ ಪ್ರತಿಭಾ ಸ್ಪರ್ಧೆ : 28.7.2019



ಪ್ರತಿ ವರ್ಷದಂತೆ ಈ ಸಲವು ಸಾಂಸ್ಕೃತಿಕ ವಿಭಾಗದ ನೇತೃತ್ವದಲ್ಲಿ ಬಳಗದ 16 ವರ್ಷ ವಯೋಮಿತಿಯ ಮಕ್ಕಳಿಗೆ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿದೆ :

**ಯಾವಾಗ : ದಿನಾಂಕ 28.7.2019, ಭಾನುವಾರ**

**ಎಲ್ಲಿ : ಹೋಟೆಲ್ ಅಜಂತಾ ಆವರಣ, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು – 560 001**

ಪ್ರತಿಭಾ ಸ್ಪರ್ಧೆಗಳಲ್ಲಿ ಬಳಗದ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

ಇದಲ್ಲದೆ ದಿನಾಂಕ 25.08.2019 ರಂದು ನಡೆಯಲಿರುವ ಮಕ್ಕಳ ಪ್ರತಿಭಾ ಮೇಳದಲ್ಲಿ ಸಂಗೀತ, ನೃತ್ಯ, ನಾಟಕ, ಪ್ರಹಸನ ಮೊದಲಾದ ವಿಷಯದಲ್ಲಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶವಿದ್ದು, ಆಸಕ್ತ ಮಕ್ಕಳು ಮುಂದಾಗಿ ತಿಳಿಸಿ, ತರಬೇತಿಯಲ್ಲಿ ಪಾಲ್ಗೊಳ್ಳಬೇಕಾಗಿ ವಿನಂತಿ.

ಹೆಚ್ಚಿನ ಮಾಹಿತಿಗಾಗಿ ಮತ್ತು ಹೆಸರನ್ನು ನೋಂದಾಯಿಸಲು ಈ ಕೆಳಗೆ ತಿಳಿಸಿರುವ ಸಂಯೋಜಕರನ್ನು ಸಂಪರ್ಕಿಸಲು ಸೂಚಿಸಲಾಗಿದೆ.

| | | |
|---|---|---|
| **ಶ್ರೀಮತಿ ಮಾಧವಿ ಬಲ್ಲಾಳ್** | **ಶ್ರೀಮತಿ ಸೌಮ್ಯ ರಾಘವೇಂದ್ರ** | **ಶ್ರೀ ಹೆಚ್. ರಮೇಶ್‌ಭಟ್** |
| 99860 39107 | 98862 00062 | 98450 24708 |

# ಸಂಭ್ರಮ ಮತ್ತು ಸಂತಸದ ಆನಂದ ಮಿಲನ - 2019

ಹೊಸ ವರುಷದ ಮೊದಲ ದಿನದ ತಂಗಾಳಿಯ ಬಿಂಕಕೆ... ಕವಿಯೊಬ್ಬರ ಕವನದ ಸಾಲುಗಳಿವು. ಹೊಸ ವರುಷದ ಆಗಮನದ ಜೊತೆಯಲ್ಲಿ ಅದೇನೋ ಉತ್ಸಾಹ ... ಉಲ್ಲಾಸ. ಗತಕಾಲವನ್ನು ಸ್ಮರಿಸುತ್ತಾ, ವರ್ತಮಾನ ದೊಂದಿಗೆ ಹೆಜ್ಜೆ ಹಾಕುತ್ತಾ, ಭವಿಷ್ಯತ್ತಿನ ಯೋಜನೆಗಳನ್ನು ರೂಪಿಸುತ್ತ ನಮ್ಮ ಮೈಮನಗಳು ಚಿಂತಿಸುವ ಪರ್ವಕಾಲ.

ಆನಂದ ಮಿಲನ ಆನಂದ ಬಳಗದ ವರುಷದ ಮೊದಲ ಕಾರ್ಯಕ್ರಮ ಜಯನಗರದ ಪ್ರಸನ್ನ ಕಲ್ಯಾಣ ಮಂಟಪದ ಸಭಾಂಗಣದಲ್ಲಿ ತಾರೀಖು 06.01.2019 ರಂದು ಈ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಆನಂದ ಬಳಗದ ಉತ್ಸಾಹಿ ಸದಸ್ಯರು ಸಭಾಂಗಣವನ್ನು ಅಲಂಕರಿಸಿದ ರೀತಿ ಮನಸ್ಸಿಗೆ ಮುದ ನೀಡುವಂತಿತ್ತು.




ಎಂದಿನಂತೆಯೇ ಈ ವರ್ಷವೂ ಆಹಾರ ಮೇಳವನ್ನು ಆಯೋಜಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ದಕ್ಷಿಣ ಕನ್ನಡ ಸನಾತನ ಧರ್ಮ ಟ್ರಸ್ಟ್‌ನ ಅಧ್ಯಕ್ಷರು ಹಾಗೂ ಗಾಂಧಿ ಬಜಾರಿನ 'ವಿದ್ಯಾರ್ಥಿಭವನ'ದ ಮಾಲೀಕರಾದ ಶ್ರೀಯುತ ರಾಮಕೃಷ್ಣ ಅಡಿಗ ಹಾಗೂ ಎಸ್.ಎಲ್.ವಿ. ರಿಫ್ರೆಷ್‌ಮೆಂಟ್ ಮತ್ತು ಪ್ರಸನ್ನ ಕಲ್ಯಾಣ ಮಂಟಪದ ರೂವಾರಿಯಾದ ಶ್ರೀಯುತ ಸುಬ್ಬಾರಾವ್ ಸಾಯಂಕಾಲ 4.30ಕ್ಕೆ ಆಹಾರ ಮೇಳವನ್ನು ಉದ್ಘಾಟಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಗದ ಸದಸ್ಯರು ಹಾಗೂ ಇತರರು ಮೇಳದಲ್ಲಿ ಭಾಗವಹಿಸಿದ್ದರು. ಅವಲಕ್ಕಿ, ಸಮೋಸ, ಬಿಸ್ಕತ್ತು, ರೊಟ್ಟಿ, ಜಾಮೂನು, ಮಂಗಳೂರು ಬನ್ಸ್, ಮಸಾಲಪುರಿ, ಬೇಲ್‌ಪುರಿ, ಜಿಲೇಬಿಚಾಟ್, ಕರಿದ ಅವರೆ ಕಾಳು, ನಿಪ್ಪಟ್ಟು, ಮಫಿನ್ಸ್, ಜೋಳದ ರೊಟ್ಟಿ, ರಾಗಿ ರೊಟ್ಟಿ, ಅಕ್ಕಿ ರೊಟ್ಟಿ, ಒಬ್ಬಟ್ಟು, ಕಡುಬು, ಪತ್ರೊಡೆ, ಮೊಸರವಲಕ್ಕಿ, ಚಿತ್ರಾನ್ನ ಮೊದಲಾದ ತಿನಿಸುಗಳು ಮೇಳದ ಪ್ರಮುಖ ಆಕರ್ಷಣೆಗಳಾಗಿದ್ದವು.

ಆಹಾರ ಮೇಳದ ಆಯೋಜನೆಯ ಬಗ್ಗೆ ಮಾತನಾಡಿದ ಮುಖ್ಯ ಅತಿಥಿ ಶ್ರೀಯುತ ರಾಮಕೃಷ್ಣ ಅಡಿಗ ಅವರು ಸಂತಸ ವ್ಯಕ್ತಪಡಿಸುತ್ತ ಪ್ರತಿ ವರ್ಷವೂ ಇದನ್ನು ಹೀಗೆಯೇ ಮುಂದುವರಿಸುವಂತೆ ಸಲಹೆ ನೀಡಿದರು. ನಂತರ ನಡೆದ ಸಭಾಕಾರ್ಯದಲ್ಲಿ ಮುಖ್ಯ ಅತಿಥಿಗಳನ್ನು ಗೌರವಿಸಿ ಮಾತನಾಡಿದ ಯುವ ವಿಭಾಗದ ಉತ್ಸಾಹಿ ಸಂಚಾಲಕರಾದ ಎಮ್. ಕೃಷ್ಣಪ್ರಸಾದ್ ಅವರು ತಮ್ಮ ಅವಧಿಯಲ್ಲಿ ನಡೆಸಿದ ಕೆಲವು ಕಾರ್ಯಕ್ರಮಗಳ ಬಗ್ಗೆ ಸೂಕ್ಷ್ಮವಾಗಿ ಮಾತನಾಡಿದರು. ಹೊಸ ವರ್ಷದಲ್ಲಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳುವಂತೆ ಸಲಹೆ ನೀಡಿ ಆರೋಗ್ಯದ ರಕ್ಷಣೆಗಾಗಿ ವ್ಯಾಯಾಮದ ಅವಶ್ಯಕತೆಯನ್ನು ಉದಾಹರಣೆ ಸಹಿತ ವಿವರಿಸಿದರು.

ಎಲ್ಲರೂ ಕಾತರದಿಂದ ಕಾಯುತ್ತಿದ್ದ ಮನರಂಜನಾ ಕಾರ್ಯಕ್ರಮಗಳು ಮನಮೋಹಕವಾಗಿತ್ತು. ಶ್ರೀಮತಿ ಡಾ॥ ವೀಣಾ ಶರತ್ ಅವರ ಸಮರ್ಥ ನಾಯಕತ್ವದಲ್ಲಿ ನಡೆದ ವಿವಿಧ ಕಾರ್ಯಕ್ರಮಗಳು ಪ್ರೇಕ್ಷಕರ ಮನಸ್ಸನ್ನು ಸೂರೆಗೊಂಡವು.

ಕಾರ್ನೇಷನ್ ಫಾರ್ ಯೂ ಇದರ ಸದಸ್ಯರಾದ ಶ್ರೀಮತಿ ಪ್ರೀತಿ ಅರೋರಾ ಮತ್ತು ದೀಪ್ತಿ ಇವರು ಶ್ರೀ ರವಿನಾರಾಯಣ ಭಟ್ ಅವರೊಂದಿಗೆ ಸೇರಿ ನಡೆಸಿಕೊಟ್ಟ



ಕಾರ್ಯಕ್ರಮಗಳು ಆಕರ್ಷಕವಾಗಿ ಮೂಡಿಬಂದವು. ಬಳಗದ ಸದಸ್ಯರೇ ನಡೆಸಿಕೊಟ್ಟ ನೃತ್ಯಗಳು, ಕಿರು ನಾಟಕಗಳು, ಬೆಡಗಿನ ಪ್ರದರ್ಶನ (ಫ್ಯಾಶನ್ ಶೋ)ಗಳನ್ನು ವೀಕ್ಷಿಸಿದ ಪ್ರೇಕ್ಷಕರ ಮನಸ್ಸು ಸಂತಸದ ಕಡಲಲ್ಲಿ ತೇಲಾಡುತ್ತಿತ್ತು.

ರವಿನಾರಾಯಣ ಭಟ್ ಅವರು ನೆರೆದಿದ್ದ ಪ್ರೇಕ್ಷಕರನ್ನು ಮಂಗಳೂರುಮಸ್ತಿ, ಗೋಪಿಕೃಷ್ಣ, ರೈನ್‌ಬೋಗಳೆಂಬ ವಿಭಾಗಗಳನ್ನಾಗಿ ವಿಂಗಡಿಸಿ ಆಟಗಳನ್ನು ನಡೆಸಿ ಮಕ್ಕಳೊಂದಿಗೆ ಹಿರಿಯರು ಸಂತಸಪಡುವಂತೆ ಮಾಡಿದರು.

ಬಳಗದ ಮಹಿಳೆಯರಿಂದ ಜಿಮ್ಮಿ ಕಮಾಲ್ ನೃತ್ಯ, ಸುನೇತ್ರ ಬಲ್ಲಾಳ್, ಪ್ರಣಮ್ಯ ಭಟ್, ನಿಶ್ಚಲ್ ತೋಳ್ಪಾಡಿ ಅವರು ನಡೆಸಿಕೊಟ್ಟ ಬಾಲಿವುಡ್ ಡ್ಯಾನ್ಸ್, ಮಹಿಳೆಯರಿಂದ ಫ್ಯಾಷನ್ ಕಿ ಜಲ್ವಾ, ಪುರುಷರ ಲುಂಗಿ ಡ್ಯಾನ್ಸ್ ಎಲ್ಲರ ಮೆಚ್ಚುಗೆಯನ್ನು ಗಳಿಸಿದವು. ಶ್ರೀಮತಿ ಗೀತಾ ಪಿ.ಆರ್. ರಾವ್ ಮತ್ತು ಶ್ರೀಮತಿ ಕುಸುಮ ಅವರು ನಡೆಸಿಕೊಟ್ಟ "ಪಿರಿ ಪಿರಿ ಪದ್ಮಕ್ಕ" ಶ್ರೀಮತಿ ಕುಸುಮಾ ಮತ್ತು ಶ್ರೀಮತಿ ಶಶಿಕಲಾ ಭಟ್ ಅಭಿನಯಿಸಿದ "ಚೆಲುವೆ ಚೆಲುವೆ" ಕಿರು ನಾಟಕಗಳು ಚೆನ್ನಾಗಿ ಮೂಡಿಬಂದವು.

ಶ್ರೀಮತಿ ರೂಪ ಮತ್ತು ತಂಡದವರಿಂದ ಅಂತಿಮ ಕಾರ್ಯಕ್ರಮವಾಗಿ ನೃತ್ಯವನ್ನು ಹಮ್ಮಿಕೊಳ್ಳಲಾಗಿತ್ತು. ಯುವ ವಿಭಾಗದ ಸಂಚಾಲಕರಾದ ಶ್ರೀ ಕೃಷ್ಣಪ್ರಸಾದ್ ಅವರು 2019ರ ಕ್ಯಾಲೆಂಡರಿನ ವಿಶೇಷತೆಯನ್ನು ತಿಳಿಸಿ, ಸದಸ್ಯರು ಕಾರ್ಯಕ್ರಮ ಮುಗಿಸಿ ಹೋಗುವಾಗ ತಮ್ಮ ಪ್ರತಿಯನ್ನು ಪಡೆಯಲು ತಿಳಿಸಿದರು. ಹಾಗೆಯೇ ಆನಂದ ಮಿಲನ ಕಾರ್ಯಕ್ರಮಕ್ಕೆ ಧನ ಸಹಾಯ ಮಾಡಿದವರಿಗೆ ಹೂಗುಚ್ಛ ನೀಡಿ ಧನ್ಯವಾದ ಅರ್ಪಿಸಿದರು. ಪ್ರಸನ್ನ






ಕಲ್ಯಾಣ ಮಂಟಪವನ್ನು ಸಕಲ ವ್ಯವಸ್ಥೆಗಳೊಂದಿಗೆ ಉಚಿತವಾಗಿ ಆನಂದ ಮಿಲನಕ್ಕಾಗಿ ನೀಡಿರುವ ದಕ್ಷಿಣ ಕನ್ನಡ ಸನಾತನ ಧರ್ಮ ಟ್ರಸ್ಟ್‌ನ ಅಧ್ಯಕ್ಷರಾದ ಶ್ರೀ ರಾಮಕೃಷ್ಣ ಅಡಿಗ ಮತ್ತು ಟ್ರಸ್ಟ್‌ನ ಎಲ್ಲಾ ಸದಸ್ಯರಿಗೆ ವಿಶೇಷ ಕೃತಜ್ಞತೆಯನ್ನು ಸಮರ್ಪಿಸಲಾಯಿತು.

ಆನಂದ ಬಳಗದ ಮಾಜಿ ಅಧ್ಯಕ್ಷರುಗಳಾದ ಶ್ರೀಯುತ ಪಿ.ಎಸ್. ಬಾಗಿಲ್ತಾಯ, ಅನಂತ ಪದ್ಮನಾಭ ಬಲ್ಲಾಳ್, ಎಸ್.ಟಿ.ಆರ್. ಮಡಿ, ಶ್ರೀಮತಿ ರತ್ನಕಲಾ ಮಡಿ (ಮಹಿಳಾ ವಿಭಾಗದ ಅಧ್ಯಕ್ಷೆ) ಮುಂತಾದವರು ಹಾಜರಿದ್ದು ಸಭೆಯನ್ನು ಚಂದಗಾಣಿಸಿ ಕೊಟ್ಟರು.

ಮನೋರಂಜನೆಯ ಜೊತೆಜೊತೆಯಲ್ಲಿ ಆಹಾರ, ಪಾನೀಯಗಳ ಸೇವನೆ ನಿರಂತರ ನಡೆದೇ ಇತ್ತು. ಶ್ರೀಯುತ ಮಧುಸೂಧನ ಕಾವೂರು ಅವರು ಧರಿಸಿದ ಅಮೇರಿಕಾ ಅಧ್ಯಕ್ಷರಾದ ಟ್ರಂಪ್ ಮುಖವಾಡ ಹಾಗೂ ಹುಲಿಯ ಮುಖವಾಡಗಳು ಕಾರ್ಯಕ್ರಮದ ಆಕರ್ಷಣೆಯ ಕೇಂದ್ರಬಿಂದುವಾಗಿತ್ತು.

ಕಾರ್ನೇಷನ್ಸ್ 4 ಯೂ ಅವರು (1) ಬೆಸ್ಟ್ (2) ಬೆಸ್ಟ್ ಸ್ಟೈಲ್ ಮತ್ತು (3) ಮೋಸ್ಟ್ ಎಂತೂಸಿಯಾಸ್ಟಿಕ್ ಮೂರು ಜನರನ್ನು ಗುರುತಿಸಿ ಬಹುಮಾನಗಳನ್ನು ಕೊಟ್ಟು ಪ್ರೋತ್ಸಾಹಿಸಿದರು. ಯುವ ವಿಭಾಗದ ಕಾರ್ಯದರ್ಶಿ ಶ್ರೀ ರಾಜೇಶ್ ರಾವ್ ವಂದನಾರ್ಪಣೆಯನ್ನು ಸಲ್ಲಿಸಿದರು.

ವಂದನಾರ್ಪಣೆಯ ನಂತರ ಉತ್ಸಾಹಿ ಸದಸ್ಯರು ದಕ್ಷಿಣ ಕನ್ನಡದ ಸಾಂಪ್ರದಾಯಿಕ ಹುಲಿವೇಷ, ನೃತ್ಯ ಹಾಗೂ ಸಿನಿಮಾ ಹಾಡುಗಳಿಗೆ ಹೆಜ್ಜೆ ಹಾಕುತ್ತಾ ನಿಗಧಿತ 8.30 ಘಂಟೆಗೆ ಕಾರ್ಯಕ್ರಮವನ್ನು ಅಂತ್ಯಗೊಳಿಸಿದರು.

**– ಶೀಲಾ ಮೋಹನ್ ರಾವ್**

# ಲವಲವಿಕೆಯ ಕ್ರೀಡಾ ಮಿಲನ – 2019



ಆನಂದ ಬಳಗದ ಯುವ ವಿಭಾಗವು ಜನವರಿ ತಿಂಗಳ 20ನೇ ತಾರೀಖಿನಂದು ಜಯನಗರದ ನ್ಯಾಷನಲ್ ಕಾಲೇಜು ಕ್ರೀಡಾಂಗಣದಲ್ಲಿ ಕ್ರೀಡಾಮಿಲನವನ್ನು ಆಯೋಜಿಸಿತ್ತು. ವೇದಿಕೆಯಲ್ಲಿ ಶ್ರೀ ಪಿ.ಎಸ್. ಬಾಗಿಲ್ತಾಯರು, ಶ್ರೀ ಬಾ. ರಾಮಚಂದ್ರ ಉಪಾಧ್ಯಾಯರು, ಶ್ರೀ ಅನಂತ ಬಲ್ಲಾಳರು, ಶ್ರೀ ಎಂ.ಕೆ. ಗುರುಮೂರ್ತಿ ಮತ್ತು ಶ್ರೀ ಎಂ.ಕೆ. ಪ್ರಸಾದ್ ಉಪಸ್ಥಿತರಿದ್ದರು.

ಬೆಳಿಗ್ಗೆ 9.30ಕ್ಕೆ ಸರಿಯಾಗಿ ಪ್ರಾರ್ಥನೆಯ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ನಮ್ಮ ತ್ರಿವರ್ಣ ಧ್ವಜದ ಸಂಕೇತವಾದ ಕೇಸರಿ, ಬಿಳಿ ಮತ್ತು ಹಸಿರು ಬಣ್ಣದ ಬಲೂನುಗಳನ್ನು ಬಾನೆತ್ತರಕ್ಕೆ ಹಾರಿಸಿ ಕಾರ್ಯಕ್ರಮಕ್ಕೆ ಉತ್ತಮ ಚಾಲನೆ ನೀಡಲಾಯಿತು. ಬಳಗದ ಯುವ ಸದಸ್ಯರಿಂದ ಕ್ರೀಡಾಜ್ಯೋತಿಯನ್ನು ಬೆಳಗಿಸಲಾಯಿತು.

ಕ್ರೀಡಾಪಟುಗಳು ಆಕರ್ಷಕವಾದ ಪಥಸಂಚಲನವನ್ನು ನಡೆಸಿದರು. ಎಲ್ಲರೂ ನಾವು ಸ್ನೇಹಭಾವದಿಂದ ಈ ದಿನದ ಎಲ್ಲಾ ಕ್ರೀಡೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತೇವೆ ಎಂದು ಪ್ರಮಾಣವಚನ ಸ್ವೀಕರಿಸಿದರು.

ಸುಮಾರು 10.00 ಗಂಟೆಗೆ ಸರಿಯಾಗಿ ಈ ವರ್ಷದ ಕ್ರೀಡಾಮಿಲನದ ಹೊಸ ಆಕರ್ಷಣೆಯಾದ ಝುಂಬಾ ಡ್ಯಾನ್ಸ್‌ನ್ನು



ಬಳಗದ ಸದಸ್ಯೆಯಾದ ಶ್ರೀಮತಿ ರೂಪ ಪೆಜತ್ತಾಯರವರು ನಡೆಸಿಕೊಟ್ಟರು. ಬಳಗದ ಎಲ್ಲಾ ಸದಸ್ಯರು ಯಾವುದೇ ರೀತಿಯ ಭೇದಭಾವವಿಲ್ಲದೆ ಬೆಳಗ್ಗಿನ ಚಳಿಯನ್ನು ಬಿಟ್ಟು ಝುಂಬಾ ಡ್ಯಾನ್ಸ್ ಮಾಡಿ ಮೈ ಮನ ಚುರುಕುಗೊಳಿಸಿಕೊಂಡರು. ಸುಮಾರು 10.30ಕ್ಕೆ ಸರಿಯಾಗಿ ಮಹಿಳೆಯರ ಮತ್ತು 50 ವರ್ಷ ಮೇಲ್ಪಟ್ಟ ಪುರುಷರ ಕ್ರಿಕೆಟ್ ಪ್ರಾರಂಭವಾಯಿತು. ತದನಂತರ ವಿವಿಧ ಕ್ರೀಡೆಗಳಾದ ಓಟದ ಸ್ಪರ್ಧೆ, ತ್ರೋಬಾಲ್, ಗುಂಡೆಸತ, ನಡಿಗೆ ಸ್ಪರ್ಧೆ, ವಾಲಿಬಾಲ್, ಲೆಮನ್ & ಸ್ಪೂನ್, aiming the wicket ಹೀಗೆ ಅನೇಕ ಕ್ರೀಡೆಗಳಲ್ಲಿ ಯಾವುದೇ ವಯೋಮಿತಿಯಿಲ್ಲದೆ ಎಲ್ಲರೂ ಭಾಗವಹಿಸಿ ಸಂತೋಷ ಪಟ್ಟರು. ಸ್ಪರ್ಧೆಯಲ್ಲಿ ವಿಜೇತರಾದ ಕ್ರೀಡಾ ಪಟುಗಳಿಗೆ ಪ್ರಶಸ್ತಿಯನ್ನೂ ನೀಡಿ ಗೌರವಿಸಲಾಯಿತು.

ಬೆಳಗ್ಗೆ 9.30 ರಿಂದ ಸಂಜೆ 5 ರವರೆಗೆ ನಡೆದ ಎಲ್ಲಾ ಕ್ರೀಡೆಗಳಲ್ಲಿ ಸುಮಾರು 250ಕ್ಕೂ ಹೆಚ್ಚು ಸದಸ್ಯರು ಉತ್ಸಾಹದಿಂದ ಭಾಗವಹಿಸಿ ಆನಂದಿಸಿದರು.




ಬೆಳಗ್ಗಿನ ಬಿಸಿ ಬಿಸಿ ಉಪಹಾರದ ವ್ಯವಸ್ಥೆಯನ್ನು ಹೋಟೆಲ್ ಪೂರ್ಣಿಮಾದ ಮಾಲೀಕರಾದ ಶ್ರೀ ಬಾ. ರಾಮಚಂದ್ರ ಉಪಾಧ್ಯಾಯರು ಮಾಡಿದರು. ಮಧ್ಯಾಹ್ನದ ರುಚಿಯಾದ ಊಟ ಮತ್ತು ಸಂಜೆಯ ಕಾಫಿಯನ್ನು ಶ್ರೀ ಯು.ವಿ. ಕೃಷ್ಣಮೂರ್ತಿಯವರು ಪ್ರಾಯೋಜಿಸಿದರು. ಕ್ರೀಡಾಪಟುಗಳು ದಣಿಯದಂತೆ ಶ್ರೀ ಭಾಸ್ಕರ್ ರಾವ್ ರವರು ತಂಪಾದ ಮಜ್ಜಿಗೆಯ ವ್ಯವಸ್ಥೆಯನ್ನು ಮಾಡಿದರು. ಕ್ರೀಡಾ ಮಿಲನದ ಎಲ್ಲಾ ವಿಜೇತರಿಗೆ ಬಹುಮಾನಗಳನ್ನು ಯುವ ವಿಭಾಗದ ಶ್ರೀ ಎಂ.ಕೆ. ಪ್ರಸಾದ್‌ರವರು ಪ್ರಾಯೋಜಿಸಿದ್ದು, ಅವರ ಉದಾರತೆಗೆ ವಿಶೇಷ ಕೃತಜ್ಞತೆ ಸಲ್ಲಲೇಬೇಕು. ಅಂತೆಯೆ ಎಲ್ಲಾ ಸದಸ್ಯರ ಸಂಪೂರ್ಣ ಸಹಾಯದಿಂದ 2019ರ ಕ್ರೀಡಾಮಿಲನವು ಯಶಸ್ವಿಯಾಗಿ ನಡೆಯಿತು.

**– ಸುಧಾ ಸಂದೀಪ್‌ರಾವ್**

## ಕ್ರೀಡಾಮಿಲನ – 2019 ತಂಡ ಪಂದ್ಯದ ಬಹುಮಾನ ವಿಜೇತರು

| | | |
|---|---|---|
| ಸಮ್ಮಿಶ್ರ ಕ್ರಿಕೆಟ್ | : ವಿಜೇತರು | : ಶ್ರೀಮತಿ ನವನೀತ ಮತ್ತು ತಂಡ |
| | : ರನ್ನರ್ಸ್ ಅಪ್ | : ಶ್ರೀಮತಿ ಮಾಧವಿ ಬಲ್ಲಾಳ್ ಮತ್ತು ತಂಡ |
| ಪುರುಷರ ಕ್ರಿಕೆಟ್ | : ವಿಜೇತರು | : ಶ್ರೀ ಭರತ್ ಅಡಿಗ ಮತ್ತು ತಂಡ |
| | : ರನ್ನರ್ಸ್ ಅಪ್ | : ಶ್ರೀ ಅಜಯ್‌ರಾವ್ ಮತ್ತು ತಂಡ |
| ಮಹಿಳೆಯರ ಹಗ್ಗ ಜಗ್ಗಾಟ | : ಪ್ರಥಮ | : ಶ್ರೀಮತಿ ವಿದ್ಯಾ ಕಾವೂರು ಮತ್ತು ತಂಡ |
| | : ದ್ವಿತೀಯ | : ಶ್ರೀಮತಿ ಮಾಲಿನಿ ಜೆ. ರಾವ್ ಮತ್ತು ತಂಡ |
| ಪುರುಷರ ಹಗ್ಗ ಜಗ್ಗಾಟ | : ಪ್ರಥಮ | : ಶ್ರೀ ಬಾಲಚಂದ್ರ ತೋಳ್ಪಾಡಿ ಮತ್ತು ತಂಡ |
| | : ದ್ವಿತೀಯ | : ಶ್ರೀ ದೇವಿ ಪ್ರಸಾದ್ ಮತ್ತು ತಂಡ |
| ತ್ರೋಬಾಲ್ | : ಪ್ರಥಮ | : ಕು॥ ಸುನೇತ್ರಾ ಬಲ್ಲಾಳ್ ಮತ್ತು ತಂಡ |
| | : ದ್ವಿತೀಯ | : ಶ್ರೀಮತಿ ವಿದ್ಯಾಕಾವೂರು ಮತ್ತು ತಂಡ |

ವಿಜೇತರಿಗೆಲ್ಲಾ ಅಭಿನಂದನೆಗಳು


### ಗಮನಿಸಿ !

## ಪುತ್ತಿಗೆ ಮತ್ತು ಪಾಡಿಗಾರ್ ವಿದ್ಯಾಪೀಠಗಳಿಗೆ ಪ್ರವೇಶಾವಕಾಶ

ಉಡುಪಿ ಶ್ರೀ ಪುತ್ತಿಗೆ ಮಠಾಧೀಶರಾದ ಪೂಜ್ಯ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರಿಂದ 35 ವರ್ಷಗಳಿಂದ ಪ್ರವರ್ತಿತವಾಗಿರುವ ಹಿರಿಯಡ್ಕ ಶ್ರೀ ಪುತ್ತಿಗೆ ಗ್ರಾಮದ "ಶ್ರೀ ಪುತ್ತಿಗೆ" ವೈದಿಕ ವೇದಾಂತ ವಿದ್ಯಾಪೀಠಕ್ಕೆ ಹಾಗೂ ಉಡುಪಿ ಹತ್ತಿರದ ಪಾಡಿಗಾರಿನಲ್ಲಿರುವ "ಶ್ರೀ ಪುತ್ತಿಗೆ" ವೈದಿಕ ಲೌಕಿಕ ವಿದ್ಯಾಪೀಠಕ್ಕೆ ಎಂಟು ವರ್ಷಕ್ಕಿಂತ ಮೇಲ್ಪಟ್ಟ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. ತಿರುಪತಿ ಹಾಗೂ ಬೆಂಗಳೂರು ವಿಶ್ವವಿದ್ಯಾಲಯಗಳಿಂದ ಮಾನಿತವಾದ ಪುತ್ತಿಗೆ ಗ್ರಾಮದ ವಿದ್ಯಾಪೀಠದಲ್ಲಿ ಸಂಪೂರ್ಣ ವೇದ, ಪೌರೋಹಿತ್ಯ, ವೇದಾಂತ ಆಗಮದ ಜೊತೆಗೆ ಜ್ಯೋತಿಷ ಮೊದಲಾದ ವೇದಾಂಗಗಳ ಪೂರ್ಣಾವಧಿ ಅಧ್ಯಯನಕ್ಕೆ ಅವಕಾಶವಿದ್ದು, ಪಾಡಿಗಾರ್‌ನ ವಿದ್ಯಾಪೀಠದಲ್ಲಿ ಸಂಸ್ಕೃತ, ಶಾಸ್ತ್ರ, ವಿದ್ಯಾಭ್ಯಾಸದ ಜೊತೆಗೆ ಆಂಗ್ಲ ಅಥವಾ ಕನ್ನಡ ಮಾಧ್ಯಮದಲ್ಲಿ ಹೊರಗಿನ ಶಾಲೆಗಳಲ್ಲಿ ಲೌಕಿಕ ವಿದ್ಯಾಭ್ಯಾಸಕ್ಕೂ ಅವಕಾಶವಿದೆ.

ಎಲ್ಲರಿಗೂ ಊಟ, ವಸತಿ, ವಸ್ತ್ರ, ಪುಸ್ತಕ ಹಾಗೂ ವಾಹನದ ಉಚಿತ ವ್ಯವಸ್ಥೆಯಿದೆ.

ಇದೀಗ ಕೆಲವೇ ಸ್ಥಾನಗಳು ಉಳಿದಿವೆ. ಈ ಅವಕಾಶಗಳ ಸದುಪಯೋಗಕ್ಕಾಗಿ ಕೂಡಲೇ ಸಂಪರ್ಕಿಸಿ :

0820 – 2542105 / 0820 – 2542205 / 8981897631 / 8553329856

## ಮೇ – ಜುಲೈ 2019ರ ಅವಧಿಯ ವಿಶೇಷ ದಿನಗಳು

| | |
|---|---|
| ಮೇ 04, ಶನಿವಾರ | – ಅಮಾವಾಸ್ಯೆ |
| ಮೇ 05, ಭಾನುವಾರ | – ವೈಶಾಖ ಮಾಸಾರಂಭ |
| ಮೇ 07, ಮಂಗಳವಾರ | – ಅಕ್ಷಯ ತದಿಗೆ |
| ಮೇ 15, ಬುಧವಾರ | – ಸರ್ವೈಕಾದಶೀ, ವೃಷಭ ಸಂಕ್ರಮಣ |
| ಮೇ 17, ಶುಕ್ರವಾರ | – ನರಸಿಂಹ ಜಯಂತಿ |
| ಮೇ 18, ಶನಿವಾರ | – ಹುಣ್ಣಿಮೆ |
| ಮೇ 26, ಭಾನುವಾರ | – ಬಳಗದ ವಸಂತೋತ್ಸವ |
| ಮೇ 30, ಗುರುವಾರ | – ಸರ್ವೈಕಾದಶೀ |
| ಜೂನ್ 03, ಸೋಮ | – ಅಮಾವಾಸ್ಯೆ |
| ಜೂನ್ 04, ಮಂಗಳ | – ಜ್ಯೇಷ್ಠ ಮಾಸ, ಗ್ರೀಷ್ಮ ಋತು ಆರಂಭ |
| ಜೂನ್ 12, ಬುಧವಾರ | – ಭಾಗೀರಥಿ ಜನ್ಮದಿನ |
| ಜೂನ್ 13, ಗುರುವಾರ | – ಸರ್ವೈಕಾದಶೀ |
| ಜೂನ್ 15, ಗುರುವಾರ | – ಮಿಥುನ ಸಂಕ್ರಮಣ |
| ಜೂನ್ 17, ಶನಿವಾರ | – ಹುಣ್ಣಿಮೆ |
| ಜೂನ್ 29, ಶನಿವಾರ | – ಸರ್ವೈಕಾದಶೀ |
| ಜುಲೈ 02, ಮಂಗಳ | – ಅಮಾವಾಸ್ಯೆ |
| ಜುಲೈ 03, ಬುಧವಾರ | – ಆಷಾಢ ಮಾಸಾರಂಭ |
| ಜುಲೈ 12, ಶುಕ್ರವಾರ | – ಪ್ರಥಮೈಕಾದಶೀ ತಪ್ತ ಮುದ್ರಾಧಾರಣ ಚಾತುರ್ಮಾಸ್ಯ ಆರಂಭ |
| ಜುಲೈ 13, ಶನಿವಾರ | – ಶಾಕ ವ್ರತಾರಂಭ |
| ಜುಲೈ 16, ಮಂಗಳ | – ಕರ್ಕಾಟಕ ಸಂಕ್ರಮಣ ಹುಣ್ಣಿಮೆ ಖಂಡಗ್ರಾಸ ಚಂದ್ರಗ್ರಹಣ |
| ಜುಲೈ 28, ಭಾನುವಾರ | – ಸರ್ವೈಕಾದಶೀ |

(ಆಧಾರ : ಪರ್ಯಾಯ ಶ್ರೀ ಪೂರ್ಣಪ್ರಜ್ಞ ಪಂಚಾಗಂ)

## ಈಶಾವಾಸ್ಯಂ



ಚೋಟುದ್ದದ ವಸ್ತುಗಳು ಉದ್ದುದ್ದ ನೆರಳು ಬೀರೆ
ನೇಸರ ಕಂತುವ ಸಮಯವದು ಖರೇ
ಕಿರಿಯರು ಹಿರಿಯರ ಮಾತು ಮೀರಲು
ಉಳಿಯಿತೆಲ್ಲಿ ಅವಕಾಶ ಅರಿಯಲು?

ಕತ್ತಲು ಬೆಳಕನು ಸರಿಸೆ ಅಸತ್ಯ ಸತ್ಯವ ನಾಚಿಸೆ
ನ್ಯಾಯವೆಲ್ಲಿ ಉಳಿಯಿತು ಶೀಲವೆಲ್ಲಿ ಬೆಳೆಯಿತು?

ಮೃತ್ಯುವು ಅಮೃತವ ಹಿಂಜರಿಸೆ
ಅಶಾಶ್ವತ ಶಾಶ್ವತವ ದಣಿಸೆ
ಪ್ರೀತಿ ಶಾಂತಿಗೆಲ್ಲಿದೆ ಜಾಗ
ಜಗವಾಗುವುದಿಲ್ಲವೆ ಆಗ ಇಬ್ಭಾಗ?

ಈಗಿನದೊಂದು ಕಡು ಪರ್ವಕಾಲ
ಜನಮನಕಿದು ಕಾತರದ ಕಾಲ
ಆದರೆ ಕಾಲವು ಬದಲಾಗಲು
ಬೇಕಿದೆಯೇ ಬಹು ಹಗಲು?

ಋತ ಅನೃತಗಳ ಪೈಪೋಟಿ
ತಮಸ್ಸು ಜ್ಯೋತಿಗಳ ಜಟಾಪಟಿ
ಜಯ ಎಂದೆಂದೂ ಸತ್ಯ ಪ್ರಕಾಶಗಳಿಗೆ
ನಿತ್ಯಸತ್ಯವಿದು ಇದಕ್ಕಿಲ್ಲ ವಿಷಗಳಿಗೆ

ಏಳು ಬೀಳುಗಳು ಈ ಜೀವನದಾಳ
ಭಗವಂತನಾಡುವ ಚದುರಂಗದಾಟ
ನ್ಯಾಯ–ಧರ್ಮಗಳಿಗೆ ಸೋಲಿಲ್ಲ ಕೊನೆಗೆ
ತುಸು ವಿಳಂಬವೆನಿಸಿದರೂ ನಮಗೆ

ಅಸ್ತಮಿಸಿದ ಸೂರ್ಯ ಬಂದೇ ಬರುವ ಬೇಗ
ಜಗವಿದೆಲ್ಲವೂ ಈಶನಿರುವ ಜಾಗ
ಆಗುಹೋಗುಗಳೆಲ್ಲ ಅವನ ಲೀಲೆ
ನಮಿಸೋಣ ಅವನಿಗೆ ನಾವು ಈ ಕೂಡಲೇ

–ದಿ. ಡಾ. ಶ್ರೀವೆಂಕಟರಮಣ, ತಲಪಾಡಿ



# ಬೃಂದಾವನ ಗೆಸ್ಟ್‌ಹೌಸ್

## BRINDAVANA GUEST HOUSE

*Posh, Homely Veg, P.G. for Ladies & Gents, with all Amenities.*

At No 9, 2nd Cross, 3rd Phase, 5th Block,
Bhuvaneshwari Nagar
BSK 3rd Stage, Bangalore - 560 085
E-mail : rajapanambur@yahoo.co.in

Prop.: **Ashokraj P** - **Mob : 99860 40802**

ವಿ.ಸೂ: ಎಲ್ಲಾ ಕಡೆಗಳಿಗೆ ಉತ್ತಮ ಸಾರಿಗೆ ಸಂಪರ್ಕ ಹೊಂದಿರುವ ಬನಶಂಕರಿ ಕೇಂದ್ರ ಭಾಗದಲ್ಲಿ ಇರುವ ಎಲ್ಲಾ ಅನುಕೂಲಗಳನ್ನು ಹೊಂದಿರುವ ಸುಸಜ್ಜಿತ ಪೇಯಿಂಗ್‌ಗೆಸ್ಟ್ ಸವಲತ್ತನ್ನು ಆನಂದ ಬಳಗದ ಸದಸ್ಯರು ಪರಿಚಯಿಸುವ ಅತಿಥಿಗಳಿಗೆ ಸೂಕ್ತ ರಿಯಾಯಿತಿ ದರದಲ್ಲಿ ನೀಡಲಾಗುವುದು.

SBI Life INSURANCE

*With best Compliments From :*

**Balakrishna Rao**
*Insurance Advisor*
Code : 16281955

SBI Life Insurance Co. Ltd.

**Member : C H Club**

No.353, "Srikrishna"
17th Main Road, Nandini Layout
Bengaluru - 560 096

For all your Life Insurance needs please contact

Mobile : 93412431
8105186350

Email : bkrao353@gmail.com

ಶುಭಾಶಯಗಳನ್ನು ಕೋರುವವರು

॥ ಹರಿಃ ಓಂ ॥



# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)

**ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121**

**ಉಪಾಧ್ಯ ಆಯುರ್ವೇದ ಭಂಡಾರ**

ಮತ್ತೀಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

ಹಾರ್ದಿಕ ಶುಭಾಶಯಗಳೊಂದಿಗೆ
ಹೋಟೆಲ್ ಅಜಂತಾ ಆತಿಥ್ಯಸೇವಾ ಸಮೂಹ

**HOTEL AJANTHA GROUP OF HOSPITALITY SERVICES**

# HOTEL AJANTHA

***A Boarding and Lodging Hotel of repute with spacious place for parking***
***Party Halls and All facilities***

No. 22/A, Mahatma Gandhi Road, Bangalore-560 001
Phone : 25584321 Fax : 080-25584780
Email : bagilthaya@vsnl.com

## AJANTHA TRINITY INN

***Luxurious Rooms for***
***Comfortable Stay***

Trinity Circle, Mahatma Gandhi Road
Bangalore-560 001

Phone : 25559491 - 5 lines

**YOUR SATISFACTION - OUR MOTTO**

ನಿಮ್ಮ ಸಂತೃಪ್ತಿಯೇ ನಮ್ಮ ಧ್ಯೇಯ

# ದಕ್ಷಿಣ ಬೆಂಗಳೂರಿನ ಅತಿ ದೊಡ್ಡ ವಿರಾಮ ತಾಣ ಈಗ ನಿಮಗಾಗಿ ತೆರೆದಿದೆ

ರಾಯಲ್ ಮೀನಾಕ್ಷಿ ಮಾಲ್
Come Enjoy Maadi




## ರಾಯಲ್ ಮೀನಾಕ್ಷಿ ಮಾಲ್ ದಕ್ಷಿಣ ಬೆಂಗಳೂರಿನ ಅತಿ ದೊಡ್ಡ ಅತ್ಯುತ್ತಮವಾದ ಏಕೀಕ್ರತ, ಶಾಪಿಂಗ್ ಹಾಗೂ ಮನರಂಜನೆ ಕೇಂದ್ರ

- **4.3 ಲಕ್ಷ ಚ.ಅಡಿ ವಿಸ್ತೀರ್ಣದೊಂದಿಗೆ 850 ಕಾರುಗಳನ್ನು ನಿಲ್ಲಿಸಲು ಸ್ಥಳ**
- **ದಕ್ಷಿಣ ಬೆಂಗಳೂರಿನ ಐಟಿ ವಲಯಕ್ಕೆ ಬಹಳ ಸಮೀಪದಲ್ಲಿದೆ**
- **ಜೆ.ಪಿ.ನಗರ, ಬಿ.ಟಿ.ಎಂ. ಲೆಔಟ್, ಜಯನಗರ, ಬನಶಂಕರಿ ಮುಂತಾದ ನಿವಾಸಗಳಿರುವ ಬಡಾವಣೆಗಳಿಗೆ ಸಮೀಪದಲ್ಲಿದೆ.**
- **ಉದ್ದೇಶಿಸಲಾದ ಮೋನೋ ರೈಲ್ ನಿಲ್ದಾಣಕ್ಕೆ ಸಮೀಪದಲ್ಲಿದೆ**
- **ಸೌಕರ್ಯಗಳು ಅಂತರರಾಷ್ಟ್ರೀಯ ಗುಣಮಟ್ಟದಾಗಿರುತ್ತವೆ**

The brand mix includes: Cinepolis | Big Bazaar | Max | Croma | Reliance Trends | Amoeba | Aharam- The Food Court | KFC | McDonald's | TGIF | Louis Philippe | Allen Solly | Bata | Woodlands | Levi's | Lenskart | Burger King | VIP Luggage | Kurlon | Chai Point | FabIndia | Heath & Glow | Taco Bell | Van Heusen | Shoppers Stop | Pantaloons Women & other leading national & international brands / retail outlets

**Vishala India Commercial Developers Pvt Ltd**
Royal Meenakshi Mall, 4th Floor, Bannerghatta Road, Bangalore - 560076. Phone No - 080 – 67080100

# FRIDGE HOUSE

Distributor & Dealer for

**HAVELLS Brand (Lloyd) AC's &**
**CARRIER MIDEA Air Conditioners**



Tower AC




Split AC



Cassette AC



Window AC



Ductable AC

Contact Persons: Mr. M K Prasad & Mr. B Krishnaswamy – M: 9845330571

# FRIDGE HOUSE

FRIDGE HOUSE DELIVERING TRUST

**Wholesaler & Importers,**

M/s. Emerson Commercial & Residential Solutions

Dealers: M/s. Kirloskar Pneumatic Co. Ltd.

M/s. Gujarat Fluorochemicals Ltd.

Enriching Lives

**EQUIPMENTS & COMPONENTS. for**

**HVAC & R,* COLD ROOMS,* RIPENING CHAMBERS,* HEAT PUMPS.**

Adithya Tower # 23, V.S.N Road, Shivaji Nagar, Bengaluru – 560 051.
Ph. No: 080-22861936, 22860260, 41513104, 41513105 & 41238022
**Email ID :** info@fridgehouse.net; **Web Site:** www.fridgehouse.net


Contact Persons: M.K. Prasad & Mr. Nagesh D Prabhu – M: 9845217197

*With Best Compliments from :*

# HOTEL DWARAKA

Anand Rao Circle
BANGALORE-560 009

**N.R. Narayana Rao**
**Managing Partner**




## ವಸತಿ ಗೃಹ

ನಮ್ಮ ವಿಶೇಷತೆಗಳು
ಸಕಲ ಸೌಲಭ್ಯಗಳನ್ನೊಳಗೊಂಡ, ಉತ್ತಮ ಗಾಳಿ, ಬೆಳಕಿರುವ,
ನಿರಂತರ ನೀರು ವಿದ್ಯುತ್ ಸರಬರಾಜಿರುವ, ಅತಿ ಹೆಚ್ಚಿಲ್ಲದ ಬಾಡಿಗೆಯಿರುವ,
ವಿಶಾಲವಾದ ಕೊಠಡಿಗಳು, ಮನಸ್ಸಿಗೆ ಶಾಂತಿ ನೆಮ್ಮದಿ ತರುವ ಶಾಂತ ವಾತಾವರಣ,
ನಮ್ರತೆಯ ಸೇವೆ, ಎಸ್.ಟಿ.ಡಿ./ಐ.ಎಸ್.ಡಿ. ಮತ್ತು
ಕಾರು ನಿಲ್ಲಿಸಲು ಅನುಕೂಲತೆ ಇತ್ಯಾದಿ...

**ದೂರವಾಣಿ : 22265011 (8 ಮಾರ್ಗಗಳು), 22268263, 22268264**

# ಕೈಲಾಸ ಪರ್ವತ ಪ್ರದಕ್ಷಿಣೆ ಮತ್ತು ಮಾನಸ ಸರೋವರ ಯಾತ್ರೆ

**ಕೈಲಾಸ ಪರ್ವತ ಪ್ರದಕ್ಷಿಣೆ ಮತ್ತು ಮಾನಸ ಸರೋವರದ ಯಾತ್ರೆ ನಿಜಕ್ಕೂ ರೋಚಕ. ಬಳಗದ ಸದಸ್ಯರಾದ ಶ್ರೀ ಮೋಹನ್ ಎಂ. (ಮೊ. 9036878178) ರವರು ಕೈಗೊಂಡ ಪ್ರವಾಸದ ಅನುಭವಗಳನ್ನು ಒಳಗೊಂಡ ಲೇಖನವನ್ನು ಭೃಗುವಾಣಿಗೆ ನೀಡಿರುತ್ತಾರೆ. ಈ ಲೇಖನದಲ್ಲಿರುವ ಮಾಹಿತಿ ಮತ್ತಿತರ ವಿಚಾರಗಳು ಮಾನಸ ಸರೋವರ ಯಾತ್ರೆ ಮಾಡುವವರಿಗೆ ಉಪಯೋಗವಾಗಲಿದೆ ಎಂದು ನಿರೀಕ್ಷೆ.**

– ಸಂ

ಹಿಂದೂಗಳಿಗೆ ಅದರಲ್ಲೂ ಶಿವಭಕ್ತರಿಗೆ, ಜೀವನದಲ್ಲಿ ಒಮ್ಮೆಯಾದರೂ ಕೈಲಾಸ ಪರ್ವತವನ್ನು ಕಣ್ಣಾರೆ ನೋಡಬೇಕೆನ್ನುವ ತುಮುಲವಿರುತ್ತೆ. ಇದಕ್ಕೆ ನಾನೇನು ಹೊರತಲ್ಲ. ವೃತ್ತಿಯಲ್ಲಿದ್ದಾಗ ಈ ಯಾತ್ರೆ ಮಾಡಲಾಗಲಿಲ್ಲ. ನಿವೃತ್ತಿಯ ನಂತರವಾದರೂ ಮಾಡಬೇಕೆಂದು ನಿರ್ಧರಿಸಿದಾಗ, ಅದು ಕೈಗೂಡಿದ್ದು 2018ರ ಆಗಸ್ಟ್ 20 ರಂದು ಪ್ರಾರಂಭವಾಗಿ, 30ಕ್ಕೆ ಸುಖಾಂತವಾಗಿ ಮುಗಿಯಿತು.



ಅಲ್ಲಿಗೆ ಹೋಗಿಬಂದ ಕೆಲವರನ್ನು ಸಂಪರ್ಕಿಸಿ, ಕೈಲಾಸ್ ಜರ್ನಿಸ್ ಪ್ರೈ.ಲಿ. (Kailash Journeys(P) Ltd.,) ರವರ ಸೇವೆ ಉತ್ತಮವಾಗಿದೆ ಎಂದು ತಿಳಿದು, ಅವರಲ್ಲಿ ಆಗಸ್ಟ್ 20ನೇ ತಾರೀಖು ಹೊರಡುವ ಗುಂಪಿಗೆ ನೊಂದಾಯಿಸಿದೆ. ಅವರ ಸೇವೆ, ಲಕ್ನೋದಿಂದ ನಮ್ಮನ್ನು ಒಯ್ದು, ಯಾತ್ರೆ ಮುಗಿಸಿ ಅಲ್ಲಿಗೇ ತಂದು ಬಿಡುವುದಾಗಿರುತ್ತದೆ. ಹಾಗಾಗಿ ನಾವು (ನಾನು ಮತ್ತು ನನ್ನ ಹೆಂಡತಿ) ಆಗಸ್ಟ್ 20ರ ಬೆಳಿಗ್ಗೆ 8.30ರ ವಿಮಾನದಲ್ಲಿ ಬೆಂಗಳೂರಿನಿಂದ ಹೊರಟು, 11 ಗಂಟೆಗೆ ಲಕ್ನೋ ಏರ್‌ಪೋರ್ಟ್‌ನಿಂದ ಹೊರಬಂದಾಗ ನಮಗಾಗಿ ಟ್ರಾವೆಲ್ ಏಜೆಂಟ್ ಕಾಯುತ್ತಾ ಇದ್ದರು, ನೇಪಾಲ್‌ಗಂಜ್‌ಗೆ (Nepalgunj) ಕರೆದೊಯ್ದರು. ಕಾರಿನಲ್ಲಿ ಹೊರಟ ನಾವು ನೇಪಾಲ್‌ಗಂಜ್‌ನ್ನು 4.00ಗೆ ಸೇರಿದೆವು (ದೂರ 200 ಕಿ.ಮೀ, ಸುಮಾರು 4 ಗಂಟೆ ಪ್ರಯಾಣ).

"ಸೋಲ್ ಟೀ (Soaltee) ಎಂಬ ಹೋಟೆಲಿನಲ್ಲಿ ನಮ್ಮ ವಾಸ್ತವ್ಯ. ದೇಶ/ವಿದೇಶದ ಬೇರೆ ಬೇರೆ ಕಡೆಗಳಿಂದ ಬಂದ ನಮ್ಮಂತಹ ಯಾತ್ರಿಗಳನ್ನು ಕೂಡಿಸಿ (ನಮ್ಮ ಗುಂಪಿನಲ್ಲಿ 31 ಜನರಿದ್ದೆವು), ಮುಂದಿನ ಪ್ರಯಾಣದ ಯೋಜನೆ ಮತ್ತು ನಮ್ಮ ಜವಾಬ್ದಾರಿಗಳನ್ನು ವಿವರಿಸುತ್ತಾರೆ. ರಾತ್ರಿ ಊಟದ ನಂತರ ಅಲ್ಲಿಯೇ ತಂಗಿದೆವು.

ಮರುದಿನ ಅಂದರೆ 21.8.18, ನಮ್ಮ ಪ್ರಯಾಣ ಸಿಮಿಕಾಟ್ (Simikot)ಗೆ (ಇದು ಸಮುದ್ರ ಮಟ್ಟದಿಂದ 2900 ಮೀಟರ್ ಮೇಲಿದೆ. ನೇಪಾಳ್‌ಗಂಜ್ ನಿಂದ ಸಿಮಿಕಾಟ್‌ಗೆ ಸಣ್ಣ ವಿಮಾನಗಳು ಮಾತ್ರ ಹಾರಾಡುವುದು (18 ಸೀಟರ್) ವಿಮಾನಗಳ ಹಾರಾಟ ಪ್ರತಿಕೂಲ ಹವಮಾನದ ಮೇಲೆ ಅವಲಂಬಿಸಿರುತ್ತೆ. ಹೀಗಾಗಿ ನೇಪಾಳ್‌ಗಂಜ್ ಏರ್‌ಪೋರ್ಟ್‌ನಲ್ಲಿ ನಾವು ಸುಮಾರು ಎರಡು ಗಂಟೆ ಕಾಯಬೇಕಾಗಿ ಬಂತು (ಕೆಲವೊಮ್ಮೆ ಒಂದೆರಡು ದಿನ ಕಾಯುವ ಪರಿಸ್ಥಿತಿಯೂ ಉಂಟು). ಪ್ರಯಾಣ ಸಮಯ ಒಂದು ಗಂಟೆ. ಸಿಮಿಕಾಟ್‌ನ ನಮ್ಮ ಹೋಟೆಲ್‌ಗೆ ಬಂದಾಗ ಸಮಯ ಮಧ್ಯಾಹ್ನ 2.45 (ಏರ್‌ಪೋರ್ಟ್ ನಿಂದ 5 ನಿಮಿಷದ ನಡೆಯ ಹಾದಿ). ಊಟದ ವ್ಯವಸ್ಥೆ ಚೆನ್ನಾಗಿತ್ತು (ಇಲ್ಲಿಂದ ಮುಂದೆ ಎಲ್ಲೂ ಮೊಸರು ದೊರೆಯುವು ದಿಲ್ಲ). ಅಲ್ಲಿಯೇ ರಾತ್ರಿ ತಂಗಿದೆವು.

22.8.18 ರಂದು ನಮ್ಮ ಪ್ರಯಾಣ ಸಿಮಿಕಾಟ್‌ನಿಂದ ಹಿಲ್ಸಾ (Hilsa) ಕಡೆಗೆ. ಇಲ್ಲಿಂದ ಹೆಲಿಕಾಪ್ಟರ್‌ನಲ್ಲೇ ಹೋಗಬೇಕು. ಒಂದು ಬಾರಿಗೆ 5 ಜನ ಪ್ರಯಾಣಿಸಬಹುದು. ನಮ್ಮ ಗುಂಪು ಹಿಲ್ಸಾಗೆ ಬಂದಾಗ ಮಧ್ಯಾಹ್ನ 4.30. ಇಲ್ಲಿರುವ ನದಿಯ ಈ ಕಡೆ ನೇಪಾಳ್ (Nepal), ಆ ಬದಿ ಚೀನಾ, ನೇಪಾಳ ಕಡೆಯಿಂದ ಶೀಘ್ರ ಹೊರಬಂದೆವಾದರೂ, ಚೀನಾ ಕಡೆ ನಮ್ಮೆಲ್ಲಾ ವಸ್ತುಗಳನ್ನು ಕೂಲಂಕುಷವಾಗಿ ಪರಿಶೀಲಿಸುವುದರಿಂದ ಎರಡರಿಂದ ಮೂರು ಗಂಟೆ ತೆಗೆದುಕೊಳ್ಳುತ್ತಾರೆ, 30 ಮಂದಿಗೆ. ಚೀನಾ ಇಮಿಗ್ರೇಷನ್ ಕೇಂದ್ರದಿಂದ ಹೊರಬಂದಾಗ ಸಾಯಂಕಾಲ 5.45 ಗಂಟೆ. ಇಲ್ಲಿಂದ ಮಿನಿಬಸ್ಸಿನಲ್ಲಿ ತಕ್ಲಾಕೋಟ್ (3900ಮೀ) ಎಂಬ ಊರನ್ನು ಸಂಜೆ 7 ಗಂಟೆಗೆ ಸೇರಿದೆವು. ಇಲ್ಲಿನ ಹೋಟೆಲ್‌ಗಳಲ್ಲಿ ರೂಮ್‌ನ ಕೀ (Key)ಯನ್ನು ಕೊಡುವುದಿಲ್ಲ. ಕೀ ಪಡೆಯಬೇಕಾದರೆ ಚೈನಾ ದೇಶದ 100 Yuanನ್ನು ಕೌಂಟರ್‌ನಲ್ಲಿ ಡೆಪಾಸಿಟ್ ಮಾಡಬೇಕು. ಇದೊಂದು ಹೊಸ ಬಗೆಯ ಅನುಭವ.

ಮರುದಿನ ಅಂದರೆ 23.8.18, ಟೆಕ್ಲಾಕೋಟ್‌ನ (Teklakot) ಅಂಗಡಿ ಬೀದಿಗಳಲ್ಲಿ, ಮುಂದಿನ ಪ್ರಯಾಣಕ್ಕೆ ಬೇಕಾಗುವ, ಬೆಟ್ಟ ಹತ್ತಲು ಮತ್ತು ಇಳಿಯಲು ಸಹಾಯಕ್ಕಾಗಿ ಕೋಲು, ಆಮ್ಲಜನಕದ ಸಿಲಿಂಡರ್ ಮತ್ತು ಮಾಸ್ಕ್ ಅನ್ನು ಖರೀದಿಸಿದೆವು. ಮಧ್ಯಾಹ್ನ 12 ಗಂಟೆಗೆ ನಮ್ಮ ಮಿನಿಬಸ್ ಮಾನಸ ಸರೋವರದ ಕಡೆಗೆ ಪ್ರಯಾಣಿಸಿತು. ಸುಮಾರು 70 ಕಿ.ಮೀ. ಪ್ರಯಾಣಿಸಿದಾಗ, "ರಾಕ್ಷಸ ಸ್ಥಳ" (ರಾವಣನು ಶಿವನನ್ನು ತಪಸ್ಸು ಮಾಡಿದ ಜಾಗ) ಪ್ರದೇಶಕ್ಕೆ ಬಂದೆವು. ಇಲ್ಲಿ ಇಳಿದು, ಸುತ್ತಮುತ್ತ ಫೋಟೋ ಕ್ಲಿಕ್ಕಿಸಿದೆವು. ಈ ಸರೋವರ ಉಪ್ಪುನೀರಿನಿಂದ ಕೂಡಿರುವುದರಿಂದ, ಯಾವುದೇ ಜಲಚರ ಪ್ರಾಣಿ ಜೀವಿಸುತ್ತಿಲ್ಲ. ಇಲ್ಲಿಂದ ದೂರದಲ್ಲಿ ಕೈಲಾಸ ಪರ್ವತ ಸಣ್ಣದಾಗಿ ಕಾಣಿಸುತ್ತದೆ. ಮತ್ತೆ 25 ಕಿ.ಮೀ. ಪ್ರಯಾಣಿಸಿದಾಗ (ಮಾನಸ ಸರೋವರದ ಕಡೆಗೆ) ದರ್ಚನ್ (Durchen) ಎಂಬಲ್ಲಿ ರಾತ್ರಿ ತಂಗಿದೆವು.

24.8.18ರಂದು ದರ್ಚನ್ ನಿಂದ ಯಮದ್ವಾರದ ಕಡೆಗೆ ಮಿನಿ ಬಸ್‌ನಲ್ಲಿ (8ಕಿ.ಮೀ) ಪ್ರಯಾಣಿಸಿ, ಅಲ್ಲಿ ಇಳಿದೆವು. ಯಮದ್ವಾರದಿಂದ ಕೈಲಾಸ ಪರ್ವತದ ಪರಿಕ್ರಮ ಪ್ರಾರಂಭವಾಗುತ್ತದೆ. ಈ ದ್ವಾರದಿಂದಲೇ ಯಮನು ಮನುಷ್ಯರ ಜೀವನವನ್ನು ತೆಗೆದುಕೊಳ್ಳುತ್ತಾನಂತೆ. ಈ ಪರಿಕ್ರಮವನ್ನು ಕಾಲುನಡಿಗೆಯಲ್ಲೂ (ಶಕ್ತಿಯಿರುವವರು) ಮತ್ತು ಕುದುರೆ ಮೇಲೆ ಕುಳಿತು ಪ್ರಯಾಣಿಸಬಹುದು. ಒಬ್ಬರಿಗೆ 2,800 ಯಾನ್ (ರೂ.30,000/–). ನಾನು ಮತ್ತು ನನ್ನ ಹೆಂಡತಿ ಕುದುರೆ ಮೇಲೆ ಹೋಗುವುದೆಂದು ನಿರ್ಧರಿಸಿ ಅವುಗಳನ್ನು ಪಡೆದೆವು. ಯಮದ್ವಾರ ಕಾಲುನಡಿಗೆಯಲ್ಲಿ ದಾಟಿ, ನಂತರ ಕುದುರೆ ಮೇಲೆ ಕುಳಿತು ನಮ್ಮ ಮೊದಲ ದಿನದ 12 ಕಿ.ಮೀ. ಪರಿಕ್ರಮ ಪ್ರಾರಂಭಿಸಿದೆವು. ದಾರಿಯುದ್ದಕ್ಕೂ ಎರಡೂ ಕಡೆ ಕಲ್ಲಿನ ಬೆಟ್ಟಗಳು, ಎಡಪಕ್ಕದಲ್ಲಿ ಸಣ್ಣ ನದಿಯ ಹರಿಯುವಿಕೆ, ಎಲ್ಲೂ ಹಸಿರಿಲ್ಲ. ಚಳಿ ಸಾಮಾನ್ಯವಾಗಿ 6ಡಿಗ್ರಿ ಯಿಂದ 14ಡಿಗ್ರಿ ಸೆಂಟಿಗ್ರೇಡ್ ವರೆಗೆ ಇರುತ್ತೆ.

ಮಧ್ಯಾಹ್ನ 4.30ಕ್ಕೆ ದಿರಾಪುಕ್ (Dirapuk) ಎಂಬಲ್ಲಿ ತಲುಪಿದೆವು. ಇಲ್ಲಿ ಕೈಲಾಸ ಪರ್ವತದ ಉತ್ತರ ದಿಕ್ಕಿನ ದರ್ಶನವಾಗುತ್ತದೆ. ಬಿಸಿಲಿತ್ತು ಮತ್ತು ಸೂರ್ಯನು ಪ್ರಕಾಶಮಾನದಿಂದ ಬೆಳಗುತ್ತಿದ್ದರಿಂದ ನಮಗೆ ಕೈಲಾಸ ಪರ್ವತ ಇಡೀ ದರ್ಶನವಾಯಿತು. ಎದುರುಗಡೆ ಕಾಣುತ್ತಿದ್ದ ಚರಣಸ್ಪರ್ಶ (ಅದೊಂದು ಕೈಲಾಸ ಪರ್ವತ ಎದುರು ಇರು ಚಿಕ್ಕ ಬೆಟ್ಟ)ದ ಅಡಿಯಲ್ಲಿ ಕುಳಿತು, ನಾವು ಸಣ್ಣ ಹವನ ಪೂಜೆ ಮಾಡಿದೆವು. ದಿರಾಪುಕ್‌ನಲ್ಲಿ ಟೆಂಟ್ ನಂತಹ ಅಥವಾ ಮಣ್ಣಿನಿಂದ ಮಾಡಿದ ವಸತಿ ವ್ಯವಸ್ಥೆ ಇರುತ್ತದೆ. ಸ್ನಾನದ ವ್ಯವಸ್ಥೆಯಿರುವುದಿಲ್ಲ. ಪಕ್ಕದಲ್ಲಿ ಹರಿಯುವ ನದಿಯ ನೀರನ್ನು ಬಳಸಿ, ದಡದಲ್ಲಿ ಸ್ನಾನ ಮಾಡಬಹುದು. ನದಿಯಲ್ಲಿ ಸ್ನಾನ ಮಾಡಿದರೆ 10,000ಯಾನ್ ದಂಡ. ತುಂಬಾ ಕೊರೆಯುವ ತಣ್ಣನೆ ನೀರಾಗಿರುತ್ತದೆ. ಬಹಿರ್ದೆಸೆಯೆಲ್ಲಾ ಬಯಲಿನಲ್ಲೇ.

25.8.18ರ ಬೆಳಿಗ್ಗೆ 6.30ಕ್ಕೆ ಎರಡನೆ ದಿನದ ಪರಿಕ್ರಮವನ್ನು ಪ್ರಾರಂಭಿಸಿದೆವು. ಇದು ತುಂಬಾ ಕಷ್ಟವೆಂದು ಮೊದಲೇ ತಿಳಿದಿದ್ದು ಮಾನಸಿಕವಾಗಿ ಗಟ್ಟಿಯಾಗಿದ್ದೆವು. ಸುಮಾರು 5 ಕಿ.ಮೀ. ಪ್ರಯಾಣಿಸಿದಾಗ, ಡೋಲ್ಮಾ ಲಾ ಪಾಸ್ (Dolma La Pas) (5700ಮೀ) ನ ಕಡಿದಾದ, ಭಯಂಕರ ಏರುವಿಕೆ ಶುರುವಾಯಿತು. (ಸುಮಾರು 3 ಕಿ.ಮೀ) ದೇವರನ್ನು ನೆನೆಯುತ್ತಾ, ಕುದುರೆಯನ್ನು ಗಟ್ಟಿಯಾಗಿ ಹಿಡಿಯುತ್ತಾ ಸಾಗಿದೆವು. ಮಳೆ ಸಣ್ಣದಾಗಿ ಅದು ಹಿಮದ ಚೂರುಗಳ (ತೆಳು ಅವಲಕ್ಕಿ ತರಹ) ಸಹಿತ. ನಾವು ಮೊದಲೇ ರೈನ್‌ಕೋಟ್ ಹಾಕಿಕೊಂಡಿದ್ದೆವು. ಇಂತಹ ಮಳೆಯಲ್ಲೇ ಸುಮಾರು 1

1/2 ಗಂಟೆ ಪ್ರಯಾಣಿಸಿದೆವು (ನಮ್ಮೊಡನೆ ಬಂದಿದ್ದ ಷೆರ್ಪಾ ಮತ್ತು ಕುದುರೆಗೆ ಅದು ಮಾಮೂಲು). ಏರುವಿಕೆಯ ನಂತರ, ಇಳಿಯುವಿಕೆಗೆ ನಮ್ಮನ್ನು ಕುದುರೆಯಿಂದ ಇಳಿಸುತ್ತಾರೆ. ಇಳಿಯುವುದನ್ನು ನಾವೇ ಮಾಡಬೇಕು. ಸುಮಾರು 3 ಕಿ.ಮೀ. ಇಲ್ಲಿ ಆಕ್ಸಿಜನ್ ಲೆವೆಲ್ ಕಡಿಮೆ ಇರುತ್ತೆ. ಏದುಸಿರು ಬಿಡುವುದು ಸಾಮಾನ್ಯ. ಅಲ್ಲಲ್ಲಿ ಕುಳಿತು ಸುಧಾರಿಸಿ ಮುಂದೆ ಹೋಗಬೇಕಾಗುತ್ತದೆ. ದಾರಿಯಲ್ಲಿ ಕೆಲವರು ಆಕ್ಸಿಜನ್ (Oxygen) ಸಿಲಿಂಡರ್ ಉಪಯೋಗಿಸುವುದನ್ನು ನೋಡಿದೆವು. ನಮಗೆ ಆ ಪ್ರಸಂಗ ಬರಲಿಲ್ಲ. ಅಂತೂ ತುಂಬಾ ಶ್ರಮಪಟ್ಟು 3 ಕಿ.ಮೀ. ದೂರವನ್ನು ಕ್ರಮಿಸಲು 2 ಗಂಟೆ ತೆಗೆದುಕೊಂಡೆವು. ಇಲ್ಲಿ ಇಳಿದ ಜಾಗದ ಹೆಸರು "ಪೇಡಿ". ಇಲ್ಲಿ ಪಾಕೆಟ್ ಊಟವನ್ನು ಮಾಡಿದೆವು. ಎರಡು ಪೂರಿ, ಸಾಗು, ಟೆಟ್ರಾ ಪಾಕೆಟ್ ಜ್ಯೂಸ್ ಮತ್ತು ಒಂದು ಆಪಲ್. ಇಲ್ಲಿ 1/2 ಗಂಟೆ ವಿರಮಿಸಿ "ಝುತುಲ್‌ಪುರ್ಕ್" (12 ಕಿ.ಮೀ) ಕಡೆಗೆ ಪ್ರಯಾಣಿಸಿದೆವು. ಈ ದೂರಕ್ಕೆ ಸುಮಾರು 5 ರಿಂದ 6 ಗಂಟೆ ಬೇಕಾಗುತ್ತದೆ. ರಾತ್ರಿ ತಂಗುವಿಕೆ ಝುತುಲ್‌ಪುರ್ಕ್‌ನಲ್ಲಿ. ಇಲ್ಲಿಯೂ ಡಾರ್‌ಮೆಟ್ರಿ ತರಹ ಮಲಗುವ ವ್ಯವಸ್ಥೆ. ತೆರೆದ ಶೌಚಾಲಯಗಳು. ಸ್ನಾನದ ವ್ಯವಸ್ಥೆ ಇರುವುದಿಲ್ಲ.

ಇಲ್ಲಿ ತಿಂಡಿ ತಿಂದು (26.8.18) ಮಾರನೇ ದಿನದ ಪರಿಕ್ರಮಕ್ಕೆ ಸಜ್ಜಾದೆವು. ಇವತ್ತಿನ ದೂರ 8 ಕಿ.ಮೀ. ಇವತ್ತು ಮಳೆಯಿರಲಿಲ್ಲ. ಸಣ್ಣ ಬಿಸಿಲಿತ್ತು ಮತ್ತು ಮೋಡ ಕವಿದ ವಾತಾವರಣವಿತ್ತು. ಅದೇ ಪರಿಸರ, ಎರಡೂ ಕಡೆ ಕಲ್ಲಿನ ಬೆಟ್ಟಗಳು, ಎಡಪಕ್ಕದಲ್ಲಿ ಸಣ್ಣ ನದಿಯ ಹರಿಯುವಿಕೆ, ಎಲ್ಲೂ ಹಸಿರಿಲ್ಲ. ಎರಡು ಕುದುರೆ ಒಟ್ಟಿಗೇ ಹೋಗುವಷ್ಟು ಜಾಗ. ಇಲ್ಲಿಗೆ ಮುಗಿಯಿತು ನಮ್ಮ ಕುದುರೆಯ ಸವಾರಿ. ನಮ್ಮ ಗುಂಪಿನ 31 ಸದಸ್ಯರಲ್ಲಿ, 3 ಜನ ಕುದುರೆಯ ಮೇಲೆ (ನಾವೂ ಸೇರಿ) ಹಾಗು ಒಬ್ಬರು ಕಾಲು ನಡಿಗೆಯಲ್ಲಿ (Trekking), 3 ದಿನದ ಸಂಪೂರ್ಣ ಪರಿಕ್ರಮವನ್ನು ಪೂರೈಸಿದವರು. ಇಲ್ಲಿಂದ ವಾಹನದಲ್ಲಿ ತೆರಳಿ (3 ಕಿ.ಮೀ.), ದರ್ಚನ್ (Darchen) ನಲ್ಲಿ ಉಳಿದಿದ್ದ 27 ಮಂದಿಯನ್ನು ಸೇರಿಕೊಂಡೆವು. ಇಲ್ಲಿಂದ ಮುಂದೆ, ಮಾನಸಸರೋವರದ ಪರಿಕ್ರಮವನ್ನು ಪ್ರಾರಂಭಿಸಿದೆವು. ಒಟ್ಟು ಪ್ರಯಾಣ 90 ಕಿ.ಮೀ. ಅಲ್ಲಲ್ಲಿ ನಿಂತು ಫೋಟೋಗಳನ್ನು ತೆಗೆದುಕೊಂಡೆವು. ರಾತ್ರಿ ತಂಗುವಿಕೆ ಮಾನಸ ಸರೋವರದಲ್ಲೇ, ಈ ದಿನ ಹುಣ್ಣಿಮೆಯಾದ್ದ ರಿಂದ, ಎಲ್ಲರೂ ಚಂದ್ರ ಬರುವುದನ್ನು ಕಾಯುತ್ತಿದ್ದೆವು. ರಾತ್ರಿ 11 ಗಂಟೆಯವರೆಗೆ ಸರೋವರದ ಮುಂದೆ ಕುಳಿತು, ಸರೋವರದ ಮತ್ತು ಸುತ್ತಲಿನ ಸೌಂದರ್ಯವನ್ನು ಆಸ್ವಾದಿಸಿದೆವು. ಮರುದಿನ ಬೆಳಿಗ್ಗೆ (27–8–19) ಸರೋವರದ ಮುಂದೆ ಬಕೇಟಿನಲ್ಲಿ ನೀರು ತೆಗೆದು ನಾವೆಲ್ಲ ದಡದ ಮೇಲೆ ಸ್ನಾನ ಮಾಡಿದೆವು. ಬಟ್ಟೆ ಬದಲಾಯಿಸಲು ಎರಡು ಸಣ್ಣ temporary tent ಹಾಕಲಾಗಿತ್ತು.

ಲಕ್ನೋ (Lucknow) ದಿಂದ ಹೇಗೆ ಬಂದೆವೊ ಅದೇ ರೀತಿ ಹಿಂದಿರುಗುವಿಕೆ ಪ್ರಾರಂಭಿಸಿ, ಬೆಂಗಳೂರನ್ನು 30–8–2018 ಬೆಳಗಿನ ಜಾವ ಸೇರಿದೆವು.

ದೇವರ ದಯದಿಂದ, ಅನುಕೂಲ ಹವಾಮಾನ ವಿದ್ದುದರಿಂದ ಮತ್ತು ನುರಿತ ಪ್ರಯಾಣದ ಗೈಡ್‌ಗಳಿಂದ, ಎಲ್ಲೂ ತೊಂದರೆಯಾಗದೆ ಕೈಲಾಸ ಪತಿಯ ಪರಿಕ್ರಮ ಮತ್ತು ಮಾನಸ ಸರೋವರದ ಪ್ರದಕ್ಷಿಣೆ ಸುಲಭಕರವಾಗಿ ಆಗಿ ಭಗವಂತನ ಕೃಪೆಗೆ ಪಾತ್ರರಾದ ಮನಃ ತೃಪ್ತಿ ಸಿಕ್ಕಿತು.

ನಾವು ಪ್ರಯಾಣಿಸಿದ ಬಗ್ಗೆ :

- ಬೆಂಗಳೂರು ನಿಂದ ಲಕ್ನೋ (ವಿಮಾನದಲ್ಲಿ) (2 ಗಂಟೆ 15 ನಿಮಿಷ)
- ಲಕ್ನೋ ದಿಂದ ನೇಪಾಳ್‌ಗುಂಜ್ (ಕಾರಿನಲ್ಲಿ) (4 ಗಂಟೆ) (200 ಕಿ.ಮೀ)
- ನೇಪಾಳ್‌ಗುಂಜ್ ನಿಂದ ಸಿನಿಕಾಟ್ (ಚಿಕ್ಕ ವಿಮಾನದಲ್ಲಿ) (1 ಗಂಟೆ)
- ಸಿನಿಕಾಟ್ ದಿಂದ ಹಿಲ್ಸಾ (ಹೆಲಿಕಾಪ್ಟರ್) (20 ನಿಮಿಷ)
- ಹಿಲ್ಸಾ ದಿಂದ ಟಾಕ್ಲಾಕೋಟ್ (ಮಿನಿ ಬಸ್) (1 ಗಂಟೆ 30 ನಿಮಿಷ)
- ಟಾಕ್ಲಾಕೋಟ ದಿಂದ ದರ್ಚನ್ (ಮಿನಿ ಬಸ್) (95 ಕಿ.ಮೀ)
- ದರ್ಚನ್ ನಿಂದಿ ಯಮದ್ವಾರಾ (ಮಿನಿ ಬಸ್) ( 8 ಕಿ.ಮೀ)
- ಯಮದ್ವಾರಾ ದಿಂದ ಝುತುಲ್‌ಪುರ್ಕ್ (ಕುದುರೆ) (22 ಕಿ.ಮೀ)
- ಝುತುಲ್‌ಪುರ್ಕ್ ನಿಂದ ದರ್ಚನ್ (ಕುದುರೆ – 8 ಕಿ.ಮೀ) ನಂತರ (ಮಿನಿಬಸ್ – 3 ಕಿ.ಮೀ)
- ಬಂದ ಹಾಗೆಯೇ ಹಿಂದಿರುಗಿವಿಕೆ .....

***With Best Compliments From :***

# M. BHASKAR RAO



## ಶ್ರೀ ಗಣೇಶ ಸ್ಟೀಲ್ ಸೆಂಟರ್

# 12, S.L.N. Charties Building, Vanivilasa Institute Road
Kalasipalyam Post, Bangalore - 560 002
Phone : Shop : 2670 9752 / Residence : 2669 5751

ಶುಭಾಶಯಗಳೊಡನೆ,

## ಬಿ.ಗಣಪತಿ ಹೆಬ್ಬಾರ್



## ಶ್ರೀ ಅಕ್ಷಯ ಉಪಾಹಾರ್

ವಿ.ವಿ.ಐ. ರಸ್ತೆ , ಫೋರ್ಟ್,
ಬೆಂಗಳೂರು 560 002
ಮೊಬೈಲ್ : 99724 29854

ಶುಭಾಶಯಗಳೊಡನೆ,

**ಕೋಟೇಶ್ವರ ಸೂರ್ಯನಾರಾಯಣ ರಾವ್**
ಸಾಹಿತ್ಯ ಸಮಾಜ ಸೇವೆ

ಪ್ರಶಸ್ತಿ ಪುರಸ್ಕೃತ
ಡಿವಿಜಿ ಪ್ರಶಸ್ತಿ, ಧರ್ಮಭೂಷಣ, ಆರ್ಯಭಟ
ಕರ್ನಾಟಕ ಭೂಷಣ, ಪ್ರಜ್ಞಾಪೀಠ ಪ್ರಶಸ್ತಿ,
ಶ್ರೀ ಕೃಷ್ಣಕೃಪಾ ಪ್ರಶಸ್ತಿ, ಆದರ್ಶ ಸಮಾಜ ರತ್ನ

**ಕೋಟೇಶ್ವರ ಸೂರ್ಯನಾರಾಯಣ ರತ್ನ ಟ್ರಸ್ಟ್ ರಿ.**
ಅಧ್ಯಕ್ಷರು

---

ಉದ್ಯಮ :
**ಮಹಾಲಕ್ಷ್ಮೀ ಫ್ಯಾನ್ಸಿ ಸ್ಟೋರ್**
21/2, ಕೋಟೇಶ್ವರ ರಸ್ತೆ, ಡಿವಿಜಿ ಅಡ್ಡರಸ್ತೆ, ಬಸವನಗುಡಿ
ಬೆಂಗಳೂರು – 04
ದೂರವಾಣಿ :
ಉದ್ಯಮ : 26675378, ಮನೆ : 26624163
ಸಹಯೋಗ : ಕೆ.ಎಸ್. ರಮೇಶ್

# ಆಂತರಿಕ ಸೌಂದರ್ಯವೇ ಮುಖ್ಯ

Human beings are made of their body mind and soul ಎಂಬ ಮಾತಿನಂತೆ 'ನಾವು' ಎನ್ನುವುದು ಇತರರ ಕಣ್ಣಿಗೆ ಕಾಣುವ ನಮ್ಮ ಶರೀರ ಮಾತ್ರವಲ್ಲ; ಅವರ ಕಣ್ಣಿಗೆ ಕಾಣದ ನಮ್ಮ ಮನಸ್ಸು ಹಾಗೂ ಅದರೊಳಗೆ ಅಂತರ್ಗತವಾಗಿರುವ, ಪರಮಾತ್ಮನ ಅಂಶವಾದ ನಮ್ಮ ಅಂತರಾತ್ಮ ಕೂಡ. ಈ ಮೂರರ ಅಸ್ತಿತ್ವ, ಆರೋಗ್ಯ, ಅವಶ್ಯಕತೆ, ಬೇಕು ಬೇಡಗಳು ಬೇರೆ ಬೇರೆ. ಶರೀರಕ್ಕೆ ಉತ್ತಮ ಆಹಾರ ಆರೈಕೆ, ಸುಖಾನುಭವ ಗಳ ಅವಶ್ಯಕತೆ ಇದ್ದರೆ, ಮನಸ್ಸಿಗೆ ಬೇಕು ಮುದ, ಪ್ರೀತಿ, ನೆಮ್ಮದಿ ಮತ್ತು ಆತ್ಮಕ್ಕೆ ಬೇಕು ಶಾಂತಿ. ಅಂತೆಯೇ ಈ ಮೂರರ ಸೌಂದರ್ಯ ಅಥವಾ ಬಾಹ್ಯ ಸೌಂದರ್ಯ. ಮಾನಸಿಕ ಸೌಂದರ್ಯ ಅಥವಾ ಆಂತರಿಕ ಸೌಂದರ್ಯ ಮತ್ತು ಆತ್ಮದ ಸೌಂದರ್ಯ.

ಕೊಂಚ ಮಟ್ಟಿಗೆ ನಮ್ಮ ಶಾರೀರಿಕ ಸೌಂದರ್ಯವನ್ನು ನಾವು ಸೇವಿಸುವ ಆಹಾರ, ಮಾಡುವ ವ್ಯಾಯಾಮ, ಪಡೆಯುವ ವಿಶ್ರಾಂತಿ, ಅಭ್ಯಾಸ-ಹವ್ಯಾಸ ಮತ್ತು ಸೌಂದರ್ಯವರ್ಧಕಗಳಿಂದ ವೃದ್ಧಿಸಿಕೊಳ್ಳಬಹುದಾದರೂ ಬಹುಪಾಲು ಅದು ನಮ್ಮ ಆಯ್ಕೆ ಅಲ್ಲದೆ ನಮ್ಮ ಅಧೀನ ದಲ್ಲಿ ಇಲ್ಲದ ಅನುವಂಶಿಕತೆಯ ಮೇಲೆ ಅವಲಂಬಿತ ವಾಗಿರುತ್ತದೆ. ಆದರೆ, ನಮ್ಮ ಆಂತರಿಕ ಸೌಂದರ್ಯವು, ನಾವು ಪಡೆದಿರುವ ಶಿಕ್ಷಣ, ಸಂಸ್ಕಾರ ಮತ್ತು ಅನುಸರಿಸುವ ಮೌಲ್ಯಾಧಾರಿತ ಧೋರಣೆಗಳ ಮೇಲೆ ಅವಲಂಬಿತ ವಾಗಿದೆ.

- ಶಾರೀರಿಕ ಸೌಂದರ್ಯವನ್ನು ವ್ಯಕ್ತಿಯ ಎತ್ತರ, ತೂಕ, ಬಣ್ಣ ಮತ್ತು ಅಂಗ ಸೌಷ್ಠವಗಳಿಂದ ಅಳೆಯಲಾಗುತ್ತದೆ. ಆದರೆ ವ್ಯಕ್ತಿಯ ಆಂತರಿಕ ಸೌಂದರ್ಯವನ್ನು ಅನುಕಂಪ ತುಂಬಿದ ಅವನ ಅಂತರಂಗ, ಇತರರಿಗಾಗಿ ಮಿಡಿಯುವ ಅವನ ಹೃದಯ, ಇತರರ ಮೇಲೆ ತೋರುವ ಪ್ರೀತಿ, ಪ್ರೇಮ, ಕರುಣೆ, ಕಾಳಜಿ, ಕನಿಕರ, ಕಳಕಳಿ, ಅವನಲ್ಲಿರುವ ಸಹನೆ, ಸಹಾನುಭೂತಿ, ಸಭ್ಯತೆ-ಸೌಜನ್ಯ, ಸತ್ಯಸಂಧತೆ, ಸರಳತೆ-ಸಹೃದಯತೆ, ನೀತಿ, ನಿಯಮ. ನಿಷ್ಠೆ, ನ್ಯಾಯ, ನಿಯತ್ತು, ಪ್ರಾಮಾಣಿಕತೆ, ಪಾರದರ್ಶಕತೆ, ಪರೋಪಕಾರಿ ಮನೋಭಾವನೆಗಳೇ ಮುಂತಾದ ಮಾನವೀಯ ಗುಣಗಳನ್ನೊಳಗೊಂಡ ಅವನ ಸ್ವಭಾವ, ನಡೆನುಡಿಗಳಿಂದ ಅಳೆಯಬಹುದು.
- ಶಾರೀರಿಕ ಸೌಂದರ್ಯವನ್ನು ವೀಕ್ಷಿಸಲು ನಮ್ಮ ಹೊರಕಣ್ಣುಗಳು ಸಾಕು; ಆದರೆ ಆಂತರಿಕ ಸೌಂದರ್ಯವನ್ನು ಗುರುತಿಸಲು ಒಳಕಣ್ಣುಗಳು ಬೇಕು; ಮೊದಲನೆಯದನ್ನು ನೋಡಿ ಆನಂದಿಸ ಬಹುದು. ಎರಡನೆಯದನ್ನು ಅನುಭವಿಸಿ ಆನಂದಿಸಬೇಕು. ಒಂದು ಭೌತಿಕವಾದರೆ, ಇನ್ನೊಂದು ಭಾವನಾತ್ಮಕ.
- ಹೊರ ಸೌಂದರ್ಯಕ್ಕೆ ಅಲಂಕಾರಗಳ ಆಭರಣಗಳ ಅವಶ್ಯಕತೆ ಇದೆ. ಆದರೆ ಒಳ ಸೌಂದರ್ಯಕ್ಕೆ ಇದಾವುದೂ ಬೇಕಿಲ್ಲ. ಒಂದು ಜನರ ಲಕ್ಷ್ಯವನ್ನು ಸೆಳದರೆ, ಇನ್ನೊಂದು ಅವರ ಹೃದಯವನ್ನು ತಟ್ಟುತ್ತದೆ.
- ಶಾರೀರಿಕ ಸೌಂದರ್ಯ ತಾತ್ಕಾಲಿಕ. ಇದಕ್ಕೆ ಇತಿ ಮಿತಿ ಇದೆ. ಕಾರಣ ಇದಕ್ಕೆ ರೋಗಗಳ ಮುಪ್ಪಿನ ಭಯವಿದೆ. ಅದಕ್ಕಲ್ಲವೇ "ಯೌವನದಲ್ಲಿ ಸೊಕ್ಕು, ವೃದ್ಧಾಪ್ಯದಲ್ಲಿ ಸುಕ್ಕು" ಅನ್ನೋದು ! ಆದರೆ ಆಂತರಿಕ ಸೌಂದರ್ಯ ಶಾಶ್ವತ. ಇದಕ್ಕೆ ಯಾರ/ಯಾವ ಭಯವೂ ಇಲ್ಲ. ಯಾರು ಬೇಕಾದರೂ ಎಷ್ಟು ಬೇಕಾದರೂ, ಯಾವಾಗ ಬೇಕಾದರೂ ಈ ಸೌಂದರ್ಯವನ್ನು ಪಡೆದುಕೊಳ್ಳ ಬಹುದು. ಇದಕ್ಕೆ ಮೇಲು, ಕೀಲು, ಬಡವ-ಬಲ್ಲಿದ, ವಿದ್ಯಾವಂತ-ಅವಿದ್ಯಾವಂತರುಗಳೆಂಬ ಅಡ್ಡಗೋಡೆ ಗಳಿಲ್ಲ. ಇದು ಭಗವಂತ ಎಲ್ಲರಿಗೂ ಸಮಾನವಾಗಿ ನೀಡಿರುವ ಒಂದು ಸದವಕಾಶ.
- ಶಾರೀರಿಕ ಸೌಂದರ್ಯವನ್ನು ಉಳಿಸಿಕೊಳ್ಳಲು ಬೇಕು ನಿತ್ಯ ಸ್ನಾನ, ಅಂತೆಯೇ ಆಂತರಿಕ ಸೌಂದರ್ಯವನ್ನು ವೃದ್ಧಿಸಿಕೊಳ್ಳಬೇಕು ಆತ್ಮಸ್ನಾನ ಅಂದರೆ ಆತ್ಮಾವಲೋಕನ.
- ಬಹಳ ಸಲ (ಮುಖ್ಯವಾಗಿ ನಮ್ಮ ಬಾಳಸಂಗಾತಿಯ ಆಯ್ಕೆಯ ವೇಳೆ) ವ್ಯಕ್ತಿಯ ಶಾರೀರಿಕ ಸೌಂದರ್ಯಕ್ಕೆ

ಮಾರುಹೋಗಿ ಬಿಡುತ್ತೇವೆ. ಆದರೆ ನೋಡಲು ಬೆಳ್ಳಗೆ ತೆಳ್ಳಗೆ, ಚಂದವಾಗಿ ಕಂಡವರು ಅವರ ಗುಣ ಸ್ವಭಾವದಲ್ಲಿ ಕೆಟ್ಟದಾಗಿಯೂ ಇರಬಹುದಲ್ಲ! ವ್ಯತಿರಿಕ್ತವಾಗಿ ನೋಡಲು ಸುಂದರಾಂಗರಲ್ಲದವರು, ಅಂತರಂಗದಿಂದ ಒಳ್ಳೆಯ ವ್ಯಕ್ತಿಗಳಾಗಿರಬಹುದು! ಶಾರೀರಿಕ ಸೌಂದರ್ಯವಿಲ್ಲದವರನ್ನಾದರೂ ಸಹಿಸಿ ಕೊಳ್ಳಬಹುದು; ಆದರೆ ಆಂತರಿಕ ಸೌಂದರ್ಯವಿಲ್ಲ ದವರ ಜತೆ ಜೀವನ ಅಸಾಧ್ಯ. ಅಸಹನೀಯ. 'ಕಣ್ಣಿಗೆ ರೂಪವು ಇಳಿಯುವ ಮುನ್ನವೆ, ಎದೆಗೆ ಪ್ರೇಮವು ಹರಿಯಿತು' ಎಂಬ ಕವಿವಾಣಿಯಂತೆ ಕೆಲವನ್ನು ನೋಡಿದಾಕ್ಷಣ ಅವರ ಆಂತರಿಕ ಸೌಂದರ್ಯವು ನಮ್ಮ ಹೃದಯಕ್ಕೆ ಗೋಚರವಾಗುತ್ತದೆ.

- ಕೆಲವೇ ಕ್ಷಣಗಳ ಭೇಟಿಯಲ್ಲಿ ವ್ಯಕ್ತಿಯ ಆಂತರಿಕ ಸೌಂದರ್ಯವನ್ನು ತಿಳಿದುಕೊಳ್ಳೋದು ಅಸಾಧ್ಯ ವಾದರೂ, ಅವರ ಜತೆಗಿನ ಕೆಲವು ದಿನಗಳ ಒಡನಾಟ ದಿಂದ, ಮಾತುಕತೆಗಳಿಂದ ಅವರಲ್ಲಿನ ಆಂತರಿಕ ಸೌಂದರ್ಯವೆಷ್ಟಿದೆ ಎಂಬುದನ್ನು ಪತ್ತೆ ಹಚ್ಚಿಕೊಳ್ಳ ಬಹುದು. ಹುಡುಗಿಯ ಮೈಬಣ್ಣ ಕಪ್ಪಗೆ ಇಲ್ಲವೇ ಹುಡುಗನ ತಲೆಕೂದಲು ಬೆಳ್ಳಗೆ ಎಂಬ ಒಂದೇ ಒಂದು ಕಾರಣಕ್ಕೆ ಹುಡುಗ ಹುಡುಗಿ ಒಬ್ಬರನ್ನೊಬ್ಬರು ತಿರಸ್ಕರಿಸುವ ನಿರ್ಧಾರ, ಅವಸರದ ನಿರ್ಧಾರ ವಾದೀತು. ಆದುದರಿಂದ ನಮ್ಮ ಬಾಳ ಸಂಗಾತಿಯ ಆಯ್ಕೆಯೇ ಇರಲಿ, ನಮ್ಮ ಒಡನಾಡಿಗಳ, ಗೆಳೆಯರ, ವ್ಯವಹಾರ ನಡೆಸಲಿರುವವರ ಕುರಿತಾಗಿಯೇ ಇರಲಿ, ಅವರ ಶಾರೀರಿಕ ಸೌಂದರ್ಯಕ್ಕಿಂತಲೂ ಮಿಗಿಲಾಗಿ, ಅವರ ಆಂತರಿಕ ಸೌಂದರ್ಯವನ್ನು ತಿಳಿದುಕೊಳ್ಳುವ ಪ್ರಾಮಾಣಿಕ ಪ್ರಯತ್ನವಿರಲಿ. ಆಗ ಮಾತ್ರ ನಾವು ಮೋಸಹೋಗುವ ಸಂದರ್ಭಗಳು ಕಡಿಮೆಯಾದೀತು.

ಈ ಎಲ್ಲಾ ಹಿನ್ನೆಲೆಯಲ್ಲಿ ನಾನೇನೂ ನೋಡಲು ಅಷ್ಟೇನೂ ಸುಂದರವಾಗಿಲ್ಲವೆಂಬ ಬೇಸರ, ಕೀಳರಿಮೆ ಯಾರಿಗೂ ಬೇಡ. ಎಲ್ಲರಿಗೂ ತಮ್ಮ ಸೌಂದರ್ಯವನ್ನು ಹೆಚ್ಚಿಸಿ ಕೊಳ್ಳುವ ಒಂದು ಮುಕ್ತ ಅವಕಾಶವಿದೆ – ಅದುವೇ ತಮ್ಮ ಆಂತರಿಕ ಸೌಂದರ್ಯವನ್ನು ಹೆಚ್ಚಿಸಿಕೊಳ್ಳುವುದು. ಇದು ಎಲ್ಲರಿಗೂ ಸಾಧ್ಯ. ನಮ್ಮಲ್ಲಿ ಪ್ರೀತಿಸಲ್ಪಡುವಂತಹ ಗುಣ ಸ್ವಭಾವಗಳಿದ್ದಲ್ಲಿ (Lovable Characters) ನಾವು ಸುಂದರ ವ್ಯಕ್ತಿಗಳಾಗಿ ಗೋಚರಿಸಲ್ಪಡುತ್ತೇವೆ. ಆಗ ಎಲ್ಲರೂ ನಮ್ಮನ್ನು ಇಷ್ಟಪಡುತ್ತಾರೆ ಮತ್ತು ನಮ್ಮ ಸಂಗವನ್ನು ಬಯಸುತ್ತಾರೆ. ವ್ಯಕ್ತಿಗೆ ಶಾರೀರಿಕ ಸೌಂದರ್ಯ ಹಾಗೂ ಆಂತರಿಕ ಸೌಂದರ್ಯ ಎರಡೂ ಇದ್ದರೆ ಹಾಲಿಗೆ ಜೇನು ಬೆರೆತಂತೆ. ರಾಮಾಯಣದ ಶ್ರೀರಾಮಚಂದ್ರನಿಗೆ ಮತ್ತು ಮಹಾಭಾರತದ ಶ್ರೀಕೃಷ್ಣಪರಮಾತ್ಮನಿಗೆ ಎರಡೂ ಇತ್ತಲ್ಲ! ಆದುದರಿಂದ ಶಾರೀರಿಕ ಸೌಂದರ್ಯವಿರಲಿ– ಇಲ್ಲದಿರಲಿ ಅಂತರಂಗದಿಂದ ನಾವು ಸುಂದರ ವ್ಯಕ್ತಿಗಳಾಗೋಣ. ಇದು ಎಲ್ಲರಿಗೂ ಸಾಧ್ಯವಿದೆ!

– ಡಾ. ಕೆ.ಪಿ. ಪುತ್ತೂರಾಯ

## ಫಾರಂ 4 (ನಿಯಮ 8 ರಂತೆ)

### ಭೃಗುವಾಣಿ ಕನ್ನಡ ತ್ರೈಮಾಸಿಕ ಪತ್ರಿಕೆಯ ಮಾಲಿಕತ್ವ ಮತ್ತು ಇತರ ವಿವರಗಳು


| | | |
|---|---|---|
| ಪ್ರಕಟಣೆಯ ಸ್ಥಳ | : | ಹೋಟೆಲ್ ಅಜಂತಾ ಆವರಣ 22ಎ, ಎಂ.ಜಿ.ರಸ್ತೆ, ಬೆಂಗಳೂರು–1 |
| ಪ್ರಕಟಣೆಯ ಅವಧಿ | : | ಮೂರು ತಿಂಗಳಿಗೊಮ್ಮೆ |
| ಮುದ್ರಕರು | : | ಪಿ.ಎಸ್. ವೆಂಕಟೇಶ್ ಬಾಬು ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್ ಬೆಂಗಳೂರು – 02 |
| ರಾಷ್ಟ್ರೀಯತೆ | : | ಭಾರತೀಯ |
| ವಿಳಾಸ | : | ಹೊಸ ತರಗುಪೇಟೆ, ಬೆಂಗಳೂರು – 02 |
| ಪ್ರಕಾಶಕರು | : | ಶ್ರೀಮತಿ ಗೀತಾ ವಾಸುದೇವ ರಾವ್ |
| ರಾಷ್ಟ್ರೀಯತೆ | : | ಭಾರತೀಯ |
| ವಿಳಾಸ | : | ಅಧ್ಯಕ್ಷರು, ಆನಂದ ಬಳಗ, 22ಎ ಎಂ.ಜಿ. ರಸ್ತೆ ಬೆಂಗಳೂರು – 01 |

ನಾನು, ಶ್ರೀಮತಿ ಗೀತಾ ವಾಸುದೇವ ರಾವ್, ಈ ಮೂಲಕ ತಿಳಿಯಪಡಿಸುವುದೇನೆಂದರೆ ಮೇಲ್ಕಂಡ ವಿವರಗಳು ನನ್ನ ತಿಳುವಳಿಕೆ ಮತ್ತು ನಂಬಿಕೆಯ ಪ್ರಕಾರ ಸಂಪೂರ್ಣ ಸತ್ಯವಾಗಿದೆ.

ಬೆಂಗಳೂರು ಸಹಿ/–
**20.3.2019** **(ಗೀತಾ ವಾಸುದೇವ ರಾವ್)**

*With Best Compliments from :*

# ಹೋಟೆಲ್ ಶೀತಲ್

ಆನಂದರಾವ್ ವೃತ್ತ, ಬೆಂಗಳೂರು – 560 009

## HOTEL
## Sheethal

#32/12, Sheshadri Road,
Ananda Rao Circle,
Bangalore - 560 009
Ph : 41139560 - 64
Mobile : 98457 77381



## Sheethal
## Residency

# 3/1, Old Sawar Lane, Sheshadri Road
Near Sangolli Rayanna Circle,
Bangalore - 560 009
Ph : 080 2234 3777 / 80 / 81
email : info@sheetalresidency.com
URL : www.sheetalresidency.com

ಎ. ಪ್ರಭಾಕರ ರಾವ್ ಮ್ಯಾನೇಜಿಂಗ್ ಪಾರ್ಟ್‌ನರ್

ಶುಭಾಶಯಗಳನ್ನು ಕೋರುವವರು



|| ಹರಿಃ ಓಂ ||

# ಉಪಾಧ್ಯ ಮತ್ತು ಕಂಪನಿ

(ಆಯುರ್ವೇದ ಔಷಧಗಳ ಸಗಟು ಮಾರಾಟಗಾರರು)



ಸಿದ್ಧಯ್ಯ ರಸ್ತೆ, ವಿಲ್ಸನ್ ಗಾರ್ಡನ್, ಬೆಂಗಳೂರು – 27, ದೂರವಾಣಿ : 22235533, 22241121

**ಉಪಾಧ್ಯ ಆಯುರ್ವೇದ ಭಂಡಾರ**

ಮತ್ತಿಕೆರೆ : 15/33, ಮೊದಲನೆಯ ಮುಖ್ಯರಸ್ತೆ
ಬೆಂಗಳೂರು – 560 054
ದೂರವಾಣಿ : 23372422

ಜಯನಗರ : 1333, 26ನೇ ಮುಖ್ಯರಸ್ತೆ,
4ನೇ 'ಟಿ' ಬ್ಲಾಕ್, ಬೆಂಗಳೂರು – 41
ದೂರವಾಣಿ : 26639321

ಶ್ರೀರಾಂಪುರ: 389, ಮಹಾಕವಿ ಕುವೆಂಪು ರಸ್ತೆ,
ನಾಗಪ್ಪ ಬ್ಲಾಕ್, ಬೆಂಗಳೂರು – 21

ನಮ್ಮ ಎಲ್ಲಾ ಸಂಸ್ಥೆಗಳಲ್ಲಿ ತಜ್ಞ
ವೈದ್ಯರುಗಳಿಂದ ಚಿಕಿತ್ಸಾ ಸೌಲಭ್ಯ
ದೊರೆಯುತ್ತದೆ.
ಸಮಯ ಬೆಳಿಗ್ಗೆ 11.00 ರಿಂದ 3.00 ಮತ್ತು
ಸಂಜೆ 7.00 ರಿಂದ 8.30 ರವರೆಗೆ
(ಆನಂದ ಬಳಗದ ಸದಸ್ಯರಿಗೆ
ರಿಯಾಯಿತಿ ದರದಲ್ಲಿ ಸೇವೆ ಲಭ್ಯ)

# ಐವರು ದಾಸವರೇಣ್ಯರ ಪುತ್ಥಳಿ ಹಾಗೂ "ಸಹಸ್ರಾಕ್ಷರ" ಕೃತಿಯ ಲೋಕಾರ್ಪಣೆ



ಶತಮಾನಕ್ಕೂ ಹಿಂದಿನಿಂದ ಭಾರತೀಯ ಸಂಗೀತ ಮತ್ತು ವಾದ್ಯಗಳ ವೈಭವವನ್ನು ಶ್ರೋತೃಗಳಿಗೆ ಉಣಬಡಿಸುತ್ತಿರುವ ಬೆಂಗಳೂರು ಗಾಯನ ಸಮಾಜದ ಸಭಾಂಗಣಕ್ಕೆ ಭೂಷಣಪ್ರಾಯವಾಗಿ ದಕ್ಷಿಣಾದಿ ಸಂಗೀತದ ಐವರು ದಿಗ್ಗಜರ ಉಬ್ಬು ಬಿತ್ತಿ ಚಿತ್ರವನ್ನು (ಮ್ಯುರಲ್‌ಆರ್ಟ್) ಇತ್ತೀಚೆಗೆ ಅಳವಡಿಸಿರುವುದು ಅಸಂಖ್ಯಾತ ಸಂಗೀತಪ್ರಿಯರಿಗೆ ಖುಷಿಯನ್ನು ತಂದುಕೊಟ್ಟಿದೆ. ದಕ್ಷಿಣಾದಿ ಕರ್ನಾಟಕ ಸಂಗೀತ ದಿಗ್ಗಜರಾದ ಕನ್ನಡಿಗ ಸಂಗೀತ ಪಿತಾಮಹ ಶ್ರೀಪುರಂದರದಾಸರು ಹಾಗೂ ಭಕ್ತದಾಸವರೇಣ್ಯ ಕನಕದಾಸರು ಇವರೀರ್ವರ – 4 ಅಡಿ ಮತ್ತು 6 ಅಡಿ ಅಳತೆಯ ಪುತ್ಥಳಿಗಳು ಫಲಕ ರೂಪದಲ್ಲಿ ಇಕ್ಕೆಲಗಳಲ್ಲಿ ಅಲಂಕರಿಸಲ್ಪಟ್ಟರೆ – ಶ್ರೀ ಮುತ್ತುಸ್ವಾಮಿ ದೀಕ್ಷಿತರು, ಶ್ರೀತ್ಯಾಗರಾಜರ ಮತ್ತು ಶ್ರೀ ಶಾಮಾಶಾಸ್ತ್ರಿಗಳ "ಮ್ಯುರಲ್‌ಆರ್ಟ್" ಸಭಾಂಗಣದ ಮೇಲ್ಭಾಗವನ್ನು ಅಲಂಕರಿಸಿದ್ದು, ಕಂಚಿನ ಲೋಹದ ತಯಾರಿಕೆಯೆಂಬಂತೆ ಕಂಡುಬರುತ್ತದೆ.

ಉಬ್ಬುಚಿತ್ರಗಳ ಸೇವೆಗೆ ಕಾರಣಕರ್ತರಾಗಿರುವ ಗಾಯನ ಸಮಾಜದ ಪೋಷಕರಲ್ಲೊಬ್ಬರಾಗಿರುವ ಶ್ರೀಯುತ ಕೋಟೇಶ್ವರ ಸೂರ್ಯನಾರಾಯಣರಾವ್ ರವರು ತಮ್ಮ 80ರ ಸಂಭ್ರಮಾಚರಣೆಯ ಅಂಗವಾಗಿ ಮಾತಾ-ಪಿತೃ ಸ್ಮರಣಾರ್ಥ ಈ ಕೊಡುಗೆಗಳನ್ನು ನೀಡಿ ಶಾಶ್ವತ ಸೇವೆಯ ಸಾರ್ಥಕ್ಯ ಮೆರೆದಿದ್ದಾರೆ.

## ಸಹಸ್ರಾಕ್ಷರ ಕೃತಿ ಬಿಡುಗಡೆ

ಇದೇ ಸಂದರ್ಭ ತಾವು ಸಾಹಿತಿಯಾಗಿ ಕಳೆದ ಮೂವತ್ತು ವರ್ಷಗಳಲ್ಲಿ ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿರುವ ಕೊಡುಗೆ ಬರಹಗಳಲ್ಲಿ ಆಯ್ದುಬರಹಗಳನ್ನು "ಸಹಸ್ರಾಕ್ಷರ" ವೆಂಬ ತಲೆಬರಹದಲ್ಲಿ ಸಾರಸ್ವತ ಲೋಕಕ್ಕೆ ಅರ್ಪಿಸುವ ಕಾರ್ಯಕ್ರಮವು ಗಣ್ಯ ಅತಿಥಿಗಳ ಉಪಸ್ಥಿತಿಯಲ್ಲಿ ನೆರವೇರಿತು.

ಅಚಿದಿನ ಮಹತ್ವಪೂರ್ಣ ಕಾರ್ಯಕ್ರಮದಲ್ಲಿ ಸುಪ್ರಿಂ ಕೋರ್ಟ್‌ನ ವಿಶ್ರಾಂತ ಮುಖ್ಯ ನ್ಯಾಯಾಧೀಶರಾದ ಶ್ರೀ ಎಂ.ಎಸ್. ವೆಂಕಟಾಚಲಯ್ಯ, ಗಾನಕಲಾಭೂಷಣ ಆರ್.ಕೆ. ಪದ್ಮನಾಭ, ಶಾಸಕ ರವಿಸುಬ್ರಹ್ಮಣ್ಯ, ಮಾಜಿ ಮೇಯರ್ ಕಟ್ಟೆಸತ್ಯನಾರಾಯಣ, ಗಾಯನ ಸಮಾಜದ ಅಧ್ಯಕ್ಷ ಡಾ. ಎಂ.ಆರ್.ವಿ. ಪ್ರಸಾದ್ ಹಾಗೂ ಶ್ರೀ ಹೆಚ್.ವಿ. ಗೌತಮ್‌ರವರು ಪಾಲ್ಗೊಂಡು ಸೇವೆಗಳನ್ನು ಲೋಕಾರ್ಪಣೆ ಮಾಡಿದರು

## ಕವನ

ಮೊದಲನೇ ಗಂಟೆ ಬಾರಿಸಿತ್ತು
ಕಂಚಿನ ದೀಪದ ತಳದಲ್ಲಿ ಸ್ವಲ್ಪವೇ ಎಣ್ಣೆ ಉಳಿದಿತ್ತು
ಮಂದ ಬೆಳಗಿನ ದಾರಿ ಕಾಣದಾಗಿತ್ತು

ಕ್ಷಿತಿಜದಲ್ಲಿ ಕಂಡ ಸಣ್ಣ ಚಮತ್ಕಾರಕೆ
ಕಣ್ಣಲ್ಲಿ ಮಿಂಚು ಹೊಳೆದಿತ್ತು
ನೇವರಿಸಿದ ಕೈ ಹಿಡಿದು ಸಾವರಿಸಿಕೊಂಡು
ಜೀವ ಶಿಖರಕ್ಕೆ ಮುಟ್ಟಿತ್ತು

ದಿಗಂತದಲ್ಲಿ ಕಂಡ ಸಹಸ್ರಾರು
ನಕ್ಷತ್ರದ ಮಿನುಗಾಟಕ್ಕೆ ರೋಮಾಂಚನಗೊಂಡ
ಮನವು ತನ್ನನ್ನು ತಾನು ಮರೆಯಿತು

– ಹರಿದಾಸಿ ಸದಾಶಿವ ಭಟ್ಟ

# ತಜ್ಞರೊಂದಿಗೆ ಮುಕ್ತ ಸಮಾಲೋಚನೆ

ಆನಂದ ಬಳಗದ ಯವ ವಿಭಾಗವು ಇತ್ತೀಚಿನ ವರ್ಷಗಳಲ್ಲಿ ಕೆಲವೊಂದು ನೂತನ ಚಟುವಟಿಕೆಗಳನ್ನು ಕೈಗೆತ್ತಿಕೊಂಡಿದ್ದು, ಸದಸ್ಯರಿಗೆ ಮತ್ತಷ್ಟು ಸಮೀಪವಾಗುತ್ತಿದೆ. ಇದೀಗ "ತಜ್ಞರೊಂದಿಗೆ ಮುಕ್ತ ಸಮಾಲೋಚನೆ" ಎಂಬ ಶೀರ್ಷಿಕೆಯಲ್ಲಿ ಸದಸ್ಯರು ಆನಂದ ಬಳಗದವರೇ ಆದ ಐವರು ವಿಷಯ ತಜ್ಞರೊಂದಿಗೆ ಆಯ್ದ ವಿಚಾರಗಳ ಬಗ್ಗೆ ಸಮಾಲೋಚಿಸಿ, ಸೂಕ್ತವಾದ ಸಲಹೆಯನ್ನು ಮತ್ತು ಪರಿಣತ ಅಭಿಪ್ರಾಯಗಳನ್ನು ಉಚಿತವಾಗಿ ಪಡೆಯಬಹುದಾಗಿದೆ

ವಿಷಯಗಳು ಮತ್ತು ತಜ್ಞರ ವಿವರ ಈ ರೀತಿ ಇವೆ :

| ವಿಷಯ | ತಜ್ಞರು |
|---|---|
| 1. ಕಾನೂನು ಸಲಹೆ ಮತ್ತು ಮಧ್ಯಸ್ಥಿಕೆ | ಶ್ರೀ ಮೋಹನ್ ರಾವ್<br>ಶ್ರೀ ಎಸ್.ಎನ್. ಪ್ರಶಾಂತ ಚಂದ್ರ |
| 2. ಶಿಕ್ಷಣ ಮತ್ತು ವೃತ್ತಿ ಹಾಗೂ ವೈದ್ಯಕೀಯ ವಿಚಾರ | ಡಾ. (ಶ್ರೀಮತಿ) ವೀಣಾ ಶರತ್<br>ಶ್ರೀ ಗುರುರಾಜ ಪೇಜಾವರ |
| 3. ವಾಸ್ತುಶಿಲ್ಪ / ನಿರ್ಮಾಣ | ಶ್ರೀ ದಿನೇಶ್ ರಾವ್ ಎಂ. |

ಆಸಕ್ತ ಮತ್ತು ಅವಶ್ಯಕತೆಯುಳ್ಳ ಸದಸ್ಯರು ಪ್ರತಿ ತಿಂಗಳ ಮೊದಲನೆಯ ಶನಿವಾರ ಅಪರಾಹ್ನ 4 ಗಂಟೆಯಿಂದ 6 ಗಂಟೆಯವರೆಗೆ ತಜ್ಞರನ್ನು ಸಂಪರ್ಕಿಸಿ, ಮುಕ್ತವಾಗಿ ಸಮಾಲೋಚನೆ ಮಾಡಬಹುದಾಗಿದೆ.

ಸಮಾಲೋಚನಾ ಸ್ಥಳ : ಹೋಟೆಲ್ ಉಡ್‌ಲ್ಯಾಂಡ್ಸ್ ಆವರಣ, ರಾಜಾರಂ ಮೋಹನ್‌ರಾಯ್ ರಸ್ತೆ, ಬೆಂಗಳೂರು – 560 025

ಆನಂದ ಬಳಗದ ಸದಸ್ಯರು ಈ ಅವಕಾಶದ ಸದ್ಬಳಕೆ ಮಾಡಿಕೊಳ್ಳಬೇಕಾಗಿ ಕೋರಿಕೆ.

**– ಎಂ.ಕೆ. ಪ್ರಸಾದ್**
ಸಂಚಾಲಕರು, ಯುವವಿಭಾಗ,
ಮೊ: 98450 18183

# ಪಡುಬಿದ್ರಿ ರಾಘವೇಂದ್ರ ರಾವ್ ನಿಧನ



ಆನಂದ ಬಳಗದಲ್ಲಿ 2002–2004 ಅವಧಿಗೆ ಅಧ್ಯಕ್ಷರಾಗಿ ಬಳಗವನ್ನು ಗಣನೀಯವಾಗಿ ಮುನ್ನಡೆಸಿದ ಹಿರಿಯ ಕಾನೂನು ತಜ್ಞ ಶ್ರೀ ಪಡುಬಿದ್ರಿ ರಾಘವೇಂದ್ರ ರಾವ್‌ರವರು ದಿನಾಂಕ 8.3.2019 ರಂದು ದೈವಾಧೀನರಾಗಿದ್ದಾರೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಿಂದ ಬೆಂಗಳೂರಿಗೆ ಬಂದು ನೆಲೆಸಿರುವ ಹಿರಿಯ ವ್ಯಕ್ತಿಗಳಲ್ಲಿ ಒಬ್ಬರಾದ ಶ್ರೀ ರಾಘವೇಂದ್ರರಾವ್ ರವರು ತಮ್ಮ 98 ವರ್ಷಗಳ ತುಂಬು ಜೀವನದಲ್ಲಿ ಸಮಾಜಕ್ಕೆ ಅಪಾರ ಸೇವೆಯನ್ನು ಸಲ್ಲಿಸಿದ್ದು, ಶ್ರೀಯುತರ ಅಗಲಿಕೆ ತುಂಬಲಾರದ ನಷ್ಟವಾಗಿದೆ. ತನ್ನ ವೃತ್ತಿ ಜೀವನದಲ್ಲಿ ಉನ್ನತಿಯನ್ನು ಸಾಧಿಸಿ, ಅಮೋಘ ಕೀರ್ತಿಯನ್ನು ಸಂಪಾದಿಸಿರುವ ಜೊತೆಗೆ ದಕ್ಷಿಣ ಕನ್ನಡಿಗರ ಸಂಘ, ಆನಂದ ಬಳಗ ಮೊದಲಾದ ಹತ್ತು ಹಲವಾರು ಸಂಘ–ಸಂಸ್ಥೆಗಳನ್ನು ಸ್ಥಾಪಿಸಿ, ಪೋಷಿಸಿಕೊಂಡು ಬಂದಿರುವ ಶ್ರೀ ರಾವ್ ಅನೇಕ ಜಟಿಲ ಸಮಸ್ಯೆಗಳಿಗೆ ಕಾನೂನು ಸಲಹೆಯನ್ನಿತ್ತು, ಅವುಗಳನ್ನು ಸಮರ್ಥವಾಗಿ ನಿಭಾಯಿಸಿ, ಜನಮನ್ನಣೆ ಗಳಿಸಿದ್ದಾರೆ. ಕೊಡುಗೈದಾನಿಯಾಗಿರುವ ಶ್ರೀ ರಾಘವೇಂದ್ರ ರಾವ್ ಅವರಿಂದ ಉಪಕೃತಗೊಂಡ ನೂರಾರು ವ್ಯಕ್ತಿಗಳು ಮತ್ತು ಸಂಘ ಸಂಸ್ಥೆಗಳು ಶ್ರೀ ರಾವ್‌ರವರ ನಿಧನದಿಂದ ದುಃಖತಪ್ತರಾಗಿದ್ದಾರೆ. ದಿವಂಗತರ ಆತ್ಮಕ್ಕೆ ಭಗವಂತ ಸದ್ಗತಿಯನ್ನು ನೀಡಿ, ಅವರ ಬಂಧು ವರ್ಗಕ್ಕೆ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ನೀಡಲಿ ಎಂದು ಬಳಗದ ಪ್ರಾರ್ಥನೆ.

*With Best Compliments from :*

# P.C. RAO

## RAO IDEAL SERVICES PRIVATE LIMITED

*Specialists in*

Staff Outsourcing and Facility Management

No. 63, 5th Cross, Vasanth Nagar,
Bangalore - 560 052
Mobile : 98444 94630
e-mail : raoideal@yahoo.co.in



## ENGINEERING CONSULTANCY SERVICES FOR CONSTRUCTIONS

## CRUTHI Consultants Consortium Pvt. Ltd.

**Services Offered :**

**In**

- Structural Engineering
- Civil Consultancy
- Project Management
- Water & Sewerage, Fire etc.,
- Electrical & Security
- HVAC & Networking

**For**

- I T Industry
- Factories
- Institutions
- Hotels and Resorts
- Commercial
- Residential

No. 204, 2ND MAIN ROAD, 4TH BLOCK,
RAJAJINAGAR, BANGALORE – 560 010
TEL: +91 80 23 15 20 14, +91 99 45 66 63 06
FAX: +91 80 41 28 22 07
EMAIL: info@cruthi.com, WEBSITE: www.cruthi.in

CONTACT:

| | |
|---|---|
| MR. DINESH RAO MUNDRUPPADY | MOB: 99456 88955 |
| MR. VASUDEVAN T S | MOB: 98450 26743 |
| MR. VIJAY KUMAR KULKARNI | MOB: 99456 96649 |

# ಸುದ್ದಿ ಸಂಗ್ರಹ

## ❑ ಪೇಜಾವರ ಶ್ರೀಯವರಿಗೆ ಗೌರವ ಡಾಕ್ಟರೇಟ್



ಶ್ರೀ ಪೇಜಾವರ ಮಠಾಧೀಶರಾದ ಪರಮಪೂಜ್ಯ ವಿಶ್ವೇಶತೀರ್ಥ ಶ್ರೀಪಾದಂಗಳವರು ಶಿಕ್ಷಣ, ಆಧ್ಯಾತ್ಮ ಮತ್ತು ಸಾಮಾಜಿಕ ಸುಧಾರಣೆಗೆ ಜೀವಿತಾವಧಿ ಕೊಡುಗೆ ನೀಡಿರುವುದನ್ನು ಪರಿಗಣಿಸಿ ಮಂಗಳೂರಿನ ಶ್ರೀನಿವಾಸ ವಿಶ್ವವಿದ್ಯಾಲಯವು ಪೂಜ್ಯ ಸ್ವಾಮೀಜಿಯವರಿಗೆ ಗೌರವ ಡಾಕ್ಟರೇಟ್ ನೀಡಿದೆ. ದಿ. 15.2. 2019 ರಂದು ನಡೆದ ವಿಶ್ವವಿದ್ಯಾಲಯದ ಪದವಿ ಪ್ರದಾನ ಹಾಗೂ ಘಟಿಕೋತ್ಸವ ಸಮಾರಂಭದಲ್ಲಿ ಪೂಜ್ಯ ಶ್ರೀ ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರಿಗೆ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ವಿಶ್ವಗುರು ಎಂದೇ ಖ್ಯಾತರಾಗಿರುವ ಯತಿಕುಲ ತಿಲಕ ಪೂಜ್ಯ ಶ್ರೀಪಾದರಿಗೆ ಭಕ್ತಿಪೂರ್ವಕ ಅಭಿವಂದನೆಗಳು.

## ❑ ಡಾ. ಪುತ್ತೂರಾಯರಿಗೆ ವಿಶ್ವ ತೌಳವ ಸಿರಿ ಪ್ರಶಸ್ತಿ



ಆನಂದ ಬಳಗದ ಹಿರಿಯ ಹಾಗೂ ಸಕ್ರಿಯ ಸದಸ್ಯರಾದ ಡಾ. ಕೆ.ಪಿ. ಪುತ್ತೂರಾಯರವರು ಶಿಕ್ಷಣ ಮತ್ತು ಸಂಶೋಧನೆ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಗಣನೀಯ ಸೇವೆಯನ್ನು ಗುರುತಿಸಿ ತುಳುನಾಡ ರಕ್ಷಣಾ ವೇದಿಕೆ (ರಿ), ಮಂಗಳೂರು ರವರು "ವಿಶ್ವ ತೌಳವಸಿರಿ ಪ್ರಶಸ್ತಿ"ಯನ್ನು ನೀಡಿ ಗೌರವಿಸಿರುತ್ತಾರೆ. ತುಳು ರಕ್ಷಣಾ ವೇದಿಕೆಯ ದಶಕದ ಸಂಭ್ರಮದ ಅಂಗವಾಗಿ ಮಂಗಳೂರು ಪುರಭವನದಲ್ಲಿ ದಿ. 29–31, ಮಾರ್ಚ್ 2019 ರಂದು ನಡೆದ ತೌಳವ ಉಚ್ಚಯ (ವಿಶ್ವ ತುಳುವರ ಸಮ್ಮಿಲನ)ದ ಸಂದರ್ಭದಲ್ಲಿ ಡಾ. ಪುತ್ತೂರಾಯರಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಡಾ. ಪುತ್ತೂರಾಯರಿಗೆ ಹಾರ್ದಿಕ ಅಭಿನಂದನೆಗಳು.

## ❑ ಶ್ರೀ ರತ್ನಾಕರರಾವ್ ಕಾವೂರು ರವರಿಗೆ ತುಳು ಅಕಾಡಮಿ ಪ್ರಶಸ್ತಿ

ಬಳಗಕ್ಕೆ ಚಿರಪರಿಚಿತರಾದ ಹಾಗೂ ಬಳಗದ ಸಕ್ರಿಯ ಸದಸ್ಯರಾದ ಶ್ರೀ ಮಧುಸೂದನ ಕಾವೂರುರವರ ಅಣ್ಣನವರಾದ ಶ್ರೀ ರತ್ನಾಕರರಾವ್ ಕಾವೂರು ರವರಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡಮಿಯ 2018ನೇ ಸಾಲಿನ ಗೌರವ ಪ್ರಶಸ್ತಿ ಲಭಿಸಿದೆ. ಜನಪ್ರಿಯ ನಾಟಕಕಾರರಾದ ಶ್ರೀ ಕಾವೂರುರವರಿಗೆ ದಿನಾಂಕ 23.3.2019 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರ ದಲ್ಲಿ ನಡೆದ ಸಮಾರಂಭದಲ್ಲಿ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. ಸ್ಮರಣಿಕೆ ಮತ್ತು ರೂ.50 ಸಾವಿರ ನಗದು ಬಹುಮಾನವನ್ನು ಒಳಗೊಂಡ ಈ ಪ್ರತಿಷ್ಠಿತ ಪ್ರಶಸ್ತಿಗೆ ಭಾಜನರಾದ ಶ್ರೀ ರತ್ನಾಕರ ರಾವ್ ಕಾವೂರುರವರಿಗೆ ಅಭಿನಂದನೆಗಳು.

## ❑ ಶುಭವಿವಾಹ

ಬಳಗದ ಹಿರಿಯ ಪೋಷಕರಾದ ಶ್ರೀ ಎನ್.ಆರ್. ನಾರಾಯಣ ರಾವ್ ರವರ ಮೊಮ್ಮಗಳು (ಶ್ರೀಮತಿ ರತ್ನಮಾಲ ಮತ್ತು ಶ್ರೀ ಎನ್. ರಾಘವೇಂದ್ರ ರವರ ಜ್ಯೇಷ್ಠಪುತ್ರಿ) ಸೌ. ಪ್ರೀತಿ ಎನ್.ಆರ್. ಎಂಬ ವಧುವಿನ ವಿವಾಹ ಶ್ರೀಮತಿ ಮಾಲತಿ ಮತ್ತು ಶ್ರೀ ಕೆ. ರಾಮನಾಥರವರ ಜ್ಯೇಷ್ಠ ಪುತ್ರ ಚಿ. ಅಜಿತ್ ರಾಮನಾಥ ಎಂಬ ವರನೊಡನೆ ದಿನಾಂಕ 13.3.2019ರಂದು ನಗರದ ವಿ. ಲಗೇಸಿ ಕನ್ವೆನ್‌ಶನ್ ಸೆಂಟರ್‌ನಲ್ಲಿ ವಿಜೃಂಭಣೆ ಯಿಂದ ನೆರವೇರಿದೆ. ಆರತಕ್ಷತೆ ಸಮಾರಂಭವೂ ಅದೇ ದಿನ ಸಂಜೆ ಸಂಭ್ರಮದಿಂದ ಜರುಗಿದೆ.

- ಬಳಗದ ಸಕ್ರಿಯ ಸದಸ್ಯರಾದ ಶ್ರೀ ಮಾಲೆಂಕಿ ಸುಬ್ರಮಣ್ಯ ಕಡಂಬಳಿತ್ತಾಯ ದಂಪತಿಗಳ ಸುಪುತ್ರಿ ಸೌ. ಸಿಂಧು ಎಂ.ಎಸ್. ರವರ ಮದುವೆ ದಿ. 22.2.2019 ರಂದು ಶ್ರೀ ರಾಕೇಶ್ ಶರ್ಮ ದಂಪತಿಗಳ ಸುಪುತ್ರ ಚಿ. ಅಮಲ್ ಉಪಾಧ್ಯಾಯ ಎಂಬ ವರನೊಡನೆ ನಗರದ ಎನ್.ಡಿ.ಕೆ. ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ನೆರವೇರಿದೆ.

- ಬಳಗದ ಪೋಷಕ ಸದಸ್ಯರಾದ ಶ್ರೀ ಎಸ್. ಹರೀಶ್ ಮತ್ತು ಶ್ರೀಮತಿ ಸಾವಿತ್ರಿ ಹರೀಶ್‌ರವರು ಖರೀದಿಸಿದ ನೂತನ ಮನೆ 'ಶ್ರೀ ಪದ್ಮ'ದ ಗೃಹ ಪ್ರವೇಶ ಸಮಾರಂಭ ದಿ. 22.3.2019 ರಂದು ವಿಜೃಂಭಣೆಯಿಂದ ನೆರವೇರಿದೆ. ಕನಕಪುರ ರಸ್ತೆಯಲ್ಲಿರುವ ವ್ಯಾಲ್ಯು ಪ್ಲಸ್ ಎಪಾರ್ಟ್ ಮೆಂಟ್‌ನಲ್ಲಿರುವ ಈ ಮನೆಯ ಗೃಹಪ್ರವೇಶ ಶುಭ ಸಂದರ್ಭದಲ್ಲಿ ಶ್ರೀ ಪುತ್ತಿಗೆ ಮಠಾಧೀಶರಾದ ಶ್ರೀ ಶ್ರೀ ಸುಗುಣೇಂದ್ರ ತೀರ್ಥ ಶ್ರೀಪಾದರ ಪಾದಪೂಜೆ ಮತ್ತು ಭಿಕ್ಷೆ ಧಾರ್ಮಿಕ ಕಾರ್ಯಕ್ರಮವನ್ನೂ ಹಮ್ಮಿಕೊಳ್ಳಲಾಗಿತ್ತು.

- ಬಳಗದ ಮಹಾದಾನಿ ಸದಸ್ಯರು ಹಾಗೂ ಭೃಗುವಾಣಿಯ ಲೇಖಕರಲ್ಲಿ ಒಬ್ಬರಾದ ಶ್ರೀ ಹಂದಾಡಿ ಸತ್ಯನಾರಾಯಣ ರಾವು ಅವರ ಭೀಮರಥಿ ಶಾಂತಿಯು ದಿ. 10.2.2019 ರಂದು ಶ್ರೀ ಪೂರ್ಣಪ್ರಜ್ಞ ವಿದ್ಯಾಪೀಠ ದಲ್ಲಿ ವಿಜೃಂಭಣೆಯಿಂದ ನೆರವೇರಿದೆ.

- ಬಳಗದ ಸದಸ್ಯರಾದ ಶ್ರೀ ಅಲೆವೂರು ಸುಧೀಂದ್ರಾಚಾರ್ ಮತ್ತು ಶ್ರೀಮತಿ ನಿರ್ಮಲಾ ದಂಪತಿಗಳ ಪುತ್ರ ಚಿ. ಪ್ರಜ್ವಲ್ ಆಚಾರ್ ಇವರ ವಿವಾಹ ಶ್ರೀಮತಿ ವೀಣಾ ಮತ್ತು ಶ್ರೀ ಚಂದ್ರಶೇಖರ್ ಭಟ್ ದಂಪತಿಗಳ ಪುತ್ರಿ ಸೌ. ಶರಧಿಯೊಡನೆ ದಿ. 11.2.2019 ರಂದು ನಂದಿಕೂರು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ಶ್ರೀ ರಾಜ ರಾಜೇಶ್ವರಿ ಸಭಾಭವನದಲ್ಲಿ ವಿಜೃಂಭಣೆಯಿಂದ ನೆರವೇರಿದೆ. ಆರತಕ್ಷತೆಯು ದಿ.15.2.2019 ರಂದು ಬೆಂಗಳೂರಿನ ಶಿವಶಕ್ತಿ ಕನ್ವೆನ್ಷನ್ ಹಾಲ್‌ನಲ್ಲಿ ಅದ್ದೂರಿಯಿಂದ ನಡೆಯಿತು.

- ಬಳಗದ ಕ್ರಿಯಾಶೀಲ ಸದಸ್ಯೆ ಶ್ರೀಮತಿ ಸುಮಂಗಲಾ ಎಸ್. ಆಚಾರ್ ಮತ್ತು ಶ್ರೀ ಕೆ. ಸದಾಶಿವ ಆಚಾರ್ಯ ರವರ ಸುಪುತ್ರ ಚಿ|| ಕಾಂತೇಶ್‌ದಾಸ್ ರವರ ವಿವಾಹ ಶ್ರೀಮತಿ ಸೌಭಾಗ್ಯ ಮತ್ತು ದಿ. ಶ್ರೀಧರ ಆಚಾರ್ಯ ದಂಪತಿಗಳ ಸುಪುತ್ರಿ ಸೌ. ಸುಶ್ಮಿತಾ ಇವರೊಂದಿಗೆ ದಿನಾಂಕ 8.3.2019 ರಂದು ಶ್ರೀಕೃಷ್ಣ ಧಾರ್ಮಿಕ ಸಭಾಂಗಣದಲ್ಲಿ ಸಂಭ್ರಮದಿಂದ ನೆರವೇರಿದೆ. ಅದೇ ದಿನ ಸಂಜೆ ಆರತಕ್ಷತೆಯೂ ಅದ್ದೂರಿಯಾಗಿ ನಡೆದಿದೆ.

## ನಿಧನ - ಶ್ರದ್ಧಾಂಜಲಿ

ಬಳಗದ ಹಿರಿಯ ಹಾಗೂ ಸಕ್ರಿಯ ಸದಸ್ಯರಾದ ಡಾ. ಶ್ರೀವೆಂಕಟರಮಣ ರವರು ತನ್ನ 73ನೇ ವಯಸ್ಸಿನಲ್ಲಿ ದಿ.29.1.2019 ರಂದು ನಿಧನರಾಗಿರುತ್ತಾರೆ. ಬೆಂಗಳೂರು ವಿಶ್ವವಿದ್ಯಾಲಯದ ಸಂಖ್ಯಾಶಾಸ್ತ್ರ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದ ಶ್ರೀಯುತರು ಕ್ರಿಯಾತ್ಮಕ ಲೇಖಕರಾಗಿದ್ದು ಅವರ ಅನೇಕ ಕವನಗಳು ಭೃಗುವಾಣಿಯಲ್ಲೂ ಪ್ರಕಟ ವಾಗಿದೆ. ಡಾ. ಶ್ರೀವೆಂಕಟರಮಣರವರ ನಿಧನಕ್ಕೆ ಶ್ರದ್ಧಾಂಜಲಿ.

ನಮ್ಮ ಬಳಗದ ಸಕ್ರಿಯ ಸದಸ್ಯರಾದ ಎಂ.ಎಲ್. ನರಸಿಂಹ ತಂತ್ರಿಯವರು ದಿನಾಂಕ 5.3.2019 ರಂದು ದಿವಂಗತ ರಾಗಿದ್ದಾರೆ. ಈ ಸಂಬಂಧ ಉತ್ತರ ಕ್ರಿಯಾದಿಗಳು ಶ್ರೀ ಅನಂತಕೃಷ್ಣ ಅಡಿಗಳ್ ನಿವಾಸದಲ್ಲಿ ನೆರವೇರಿದ್ದು ವೈಕುಂಠ ಸಮಾರಾಧನೆ ದಿನಾಂಕ 16.3.2019 ರಂದು ಮಲ್ಲೇಶ್ವರ ಪಲಿಮಾರು ಮಠದಲ್ಲಿ ವಿದ್ಯುಕ್ತವಾಗಿ ನೆರವೇರಿದೆ. ಶ್ರೀಯುತರ ಆತ್ಮಕ್ಕೆ ಚಿರಶಾಂತಿಯನ್ನು ಭಗವಂತ ನೀಡಲಿ ಎಂದು ಪ್ರಾರ್ಥನೆ.

ಬಳಗದ ಪೋಷಕರಾಗಿದ್ದ ಶ್ರೀ ಕೆ. ನಾರಾಯಣರಾವ್ (ಕೊರವಡಿ) ಯವರು ದಿ. 9.3.2019 ರಂದು ನಿಧನರಾಗಿದ್ದು ಅವರ ಉತ್ತರಕ್ರಿಯಾದಿಗಳು ಗುರುನರಸಿಂಹ ವೈದಿಕ ಮಂದಿರದಲ್ಲಿ ಹಾಗೂ ವೈಕುಂಠ ಸಮಾರಾಧನೆ ದಿನಾಂಕ 21.3.2019 ರಂದು ಶ್ರೀಕೃಷ್ಣ ವಾದಿರಾಜ ಸಭಾಂಗಣದಲ್ಲಿ ವಿದ್ಯುಕ್ತವಾಗಿ ನೆರವೇರಿದೆ. ಮೃತರ ಆತ್ಮಕ್ಕೆ ಭಾವಪೂರ್ಣ ಶ್ರದ್ಧಾಂಜಲಿ.

ಬಳಗದ ಹಿರಿಯ ಸದಸ್ಯರಾದ ಶ್ರೀ ಜಿ. ಕೇಶವರಾವ್ (92 ವರ್ಷ) ರವರು ದಿನಾಂಕ 27.2..2019 ರಂದು ದೈವಾಧೀನರಾಗಿದ್ದಾರೆ. ಭಗವಂತನ ಇಚ್ಛೆಯಂತೆ ಶ್ರೀಯುತರ ಪತ್ನಿ ಶ್ರೀಮತಿ ಸರೋಜಿನಿ ಬಿ. ದೇವಿಯವರು (84 ವರ್ಷ) ಪತಿಯವರ ಮರಣದ ಧರ್ಮೋದಕ ದಿನದಂದೇ ನಿಧನರಾಗಿರುವುದು ಅಪರೂಪದ ಘಟನೆ. ಬಳಗದ ಆರಂಭದ ದಿನಗಳಲ್ಲಿ ಸದಸ್ಯತ್ವವನ್ನು ನೋಂದಾಯಿಸುವಲ್ಲಿ ಪತಿಯ ಜೊತೆಗೂಡಿ ಶ್ರೀಮತಿ ಸರೋಜಿನಿ ದೇವಿಯವರು ಪಟ್ಟ ಶ್ರಮ ಸದಾ ಸ್ಮರಣೀಯ. ದಿವಂಗತ ದಂಪತಿಗಳ ಆತ್ಮಕ್ಕೆ ಭಗವಂತ ಚಿರಶಾಂತಿ ನೀಡಲಿ ಎಂದು ಬಳಗದ ಪ್ರಾರ್ಥನೆ.

### ಯುವ ವಿಭಾಗದ ಚಟುವಟಿಕೆಗಳ ಪಕ್ಷಿನೋಟ

* ಸ್ವ–ಪ್ರೇರಣೆ ಬಗ್ಗೆ ಕಾರ್ಯಾಗಾರ : ಜುಲೈ/ಆಗಸ್ಟ್ 2019
* ಗಣೇಶೋತ್ಸವ : 8.9.2019
* ಕ್ಯಾಲೆಂಡರ್ 2020 ಬಿಡುಗಡೆ : 14.12.2019
* ಆನಂದ ಮಿಲನ – 2020 : 5.1.2020
* ಕ್ರೀಡಾ ಮಿಲನ – 2020 : 19.1.2020

Start the day feeling .....



.......Light & comfortable




***For sure relief from***
***CONSTIPATION***
***use...***

**Dosage:**
Anuloma DS Tablets - 1 to 2 tablets at bedtime with warm water

**Dosage:**
Anuloma Churna - ½ to 1 teaspoonful at bedtime with warm water.

With best compliments from the manufacturers of:

**Anuloma®**
DS Tab and Churna

For Safe and Sure relief from Constipation




BPRL Since 1950

**SAGAR PHARMACEUTICALS**
Herbal Healthcare Division of BPRL PVT. LTD.

Sagar Since 1975

No.163, Reservoir Street, Basavanagudi, Bangalore - 560 004. INDIA. Consumer Care No.: 080-41208661 Website: www.sagarpharma.in

Bhruguvani (Jan-March 2019) Regd. with RNI under No.KARKAN/2012/45587 No. of Pages : 32 (28+4)




If undelivered please return to:
**Ananda Balaga**
Hotel Ajantha Complex, 22A, M.G. Road
Bengaluru - 560 001
Phone : 2559 4457

Published by Smt. Geetha.V.Rao, President, Ananda Balaga, Bengaluru - 560 001 Printed by Omkar Offset Printers, Bengaluru - 02